ಪ್ರಕಟಿಸಲಾದ ದಿನಾಂಕ 02/ಜನವರಿ/2025

## ನಿಯಮಗಳು ಮತ್ತು ಷರತ್ತುಗಳು

ಈ ನಿಯಮಗಳು ಮತ್ತು ಷರತ್ತುಗಳು ("**ನಿಯಮಗಳು ಮತ್ತು ಷರತ್ತುಗಳು**") ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್ ("**ಹೆಚ್.ಡಿ.ಎಫ್.ಸಿ ಬ್ಯಾಂಕ್**") ನೀಡುವ ಪ್ರೀಪೇಯ್ಡ್ ಕಾರ್ಡ್‌ಗಳಿಗೆ (ಮುಂದೆ ನಿರ್ವಚಿಸಲಾಗಿದೆ) ಅನ್ವಯಿಸುತ್ತವೆ ಮತ್ತು ಅವುಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ನಿಗದಿಪಡಿಸುತ್ತವೆ. ಈ ನಿಯಮಗಳು ಮತ್ತು ಷರತ್ತುಗಳು ಕಾಲದಿಂದ ಕಾಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಗದಿಪಡಿಸುವ ಇತರ ಯಾವುದೇ ಷರತ್ತುಗಳಿಗೆ ಸೇರ್ಪಡೆಯಾಗಿರುತ್ತವೆಯೇ ಹೊರತು ಅವುಗಳಿಗೆ ವ್ಯತಿರಿಕ್ತವಾಗಿರುವುದಿಲ್ಲ.

1. **ನಿರ್ವಚನಗಳು**

ವಸ್ತು ಅಥವಾ ಸಂದರ್ಭಕ್ಕೆ ಅಸಂಗತವಾದ ಅಂಶವು ಯಾವುದೇ ಇರದಿದ್ದ ಪಕ್ಷದಲ್ಲಿ, ಕೆಳಗೆ ದಪ್ಪ ಅಕ್ಷರಗಳಲ್ಲಿ ತೋರಿಸಲಾಗಿರುವ ಪದಗಳಿಗೆ ಈ ಕೆಳಗಿನಂತೆ ಅರ್ಥಗಳಿರುತ್ತವೆ:

**"ಲೆಕ್ಕ"** ಎಂದರೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾರ್ಡ್‌ದಾರರು ಹೊಂದಿರುವ ಯಾವುದೇ ಉಳಿತಾಯ/ಚಾಲ್ತಿ ಖಾತೆ ಎಂದು ಅರ್ಥವಿರುತ್ತದೆ;

**"ಎಚ್ಚರಿಕೆ (ಅಲರ್ಟ್) ಗಳು"** ಎಂದರೆ ಕಾರ್ಡ್‌ದಾರರು ಮತ್ತು/ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಗದಿಪಡಿಸಿರುವ ಅಥವಾ ಇರಿಸಿರುವ ಸೂಚನೆಗಳ ಆಧಾರದ ಮೇಲೆ ಕಾರ್ಡ್‌ದಾರಿಗೆ ಮೊಬೈಲ್ ಫೋನ್ ಮೂಲಕ ಕಿರು ಸಂದೇಶ ಸೇವೆಯ (ಎಸ್‌ಎಂಎಸ್) ರೂಪದಲ್ಲಿ ಕಳುಹಿಸಲಾಗುವ ಗ್ರಾಹಕೀಯ ಸಂದೇಶಗಳು ಅಥವಾ ವಿದ್ಯುನ್ಮಾನ ಅಂಚೆಯ ಮೂಲಕ ಕಳುಹಿಸಲಾಗುವ ಸಂದೇಶ ಎಂದು ಅರ್ಥವಿರುತ್ತದೆ;

**"ಅನ್ವಯವಾಗುವ ಕಾನೂನು"** ಎಂದರೆ ಎಲ್ಲ ಅನ್ವಯವಾಗುವ ಶಾಸನಗಳು, ಭಾರತದಲ್ಲಿನ ಯಾವುದೇ ಶಾಸಕಾಂಗ ಕಾಯಗಳಿಂದ ಮಾಡಲಾಗುವ ಯಾವುದೇ ಶಾಸನಗಳು ಅಥವಾ ಯಾವುದೇ ಸರ್ಕಾರಿ ಪ್ರಾಧಿಕಾರಗಳು ಹೊರಡಿಸುವ ಕಾಯ್ದೆಗಳು, ಕಾನೂನುಗಳು, ಸುಗ್ರೀವಾಜ್ಞೆಗಳು, ನಿಯಮಗಳು, ಉಪ-ನಿಯಮಗಳು, ನಿಬಂಧನೆಗಳು, ಅಧಿಸೂಚನೆಗಳು, ಮಾರ್ಗಸೂಚಿಗಳು, ಕಾರ್ಯನೀತಿಗಳು, ನಿರ್ದೇಶನಗಳು, ನಿರ್ದೇಶಕಗಳು ಮತ್ತು ಯಾವುದೇ ಮಾರ್ಪಾಡುಗಳು ಅಥವಾ ಸಂವಾದಿ ಮರು-ಶಾಸನಗಳು ಎಂದರ್ಥ ಹಾಗೂ ಇವೆಲ್ಲವೂ ಇದರಲ್ಲಿ ಸೇರುತ್ತವೆ;

**"ಅರ್ಜಿದಾರರು"** ಎಂದರೆ ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡ್ ಅನ್ನು (ಕಾರ್ಡ್‌ಗಳನ್ನು) ನೀಡುವುದಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಗದಿಪಡಿಸಿರುವ ಅರ್ಜಿ ನಮೂನೆಯನ್ನು ಸಲ್ಲಿಸುವ ಮೂಲಕ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ವ್ಯಕ್ತಿ ಎಂದರ್ಥ;

**"ಅರ್ಜಿ ನಮೂನೆ"** ಎಂದರೆ ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡ್ ಅನ್ನು ನೀಡುವುದಕ್ಕಾಗಿ, ಯುಕ್ತವಾಗಿ ತುಂಬಿಸಿ ಅರ್ಜಿದಾರರಿಂದ ಪಡೆಯಲಾಗುವ ಅರ್ಜಿ ನಮೂನೆಯಾಗಿರುತ್ತದೆ ಮತ್ತು ಈ ಅರ್ಜಿ ನಮೂನೆಯು ಎಲ್ಲ ಸಂಬಂಧಿತ ಅನುಬಂಧಗಳು ಹಾಗೂ ಆದೇಶಗಳೂ ಸೇರುತ್ತವೆ;

**"ಕಾರ್ಡ್ ಶಿಲ್ಕು"** ಎಂದರೆ ಕಾಲದಿಂದ ಕಾಲಕ್ಕೆ ಪ್ರೀಪೇಯ್ಡ್ ಕಾರ್ಡ್‌ನಲ್ಲಿ (ಕಾರ್ಡ್‌ಗಳಲ್ಲಿ) ತುಂಬಲಾಗುವ/ ಮತ್ತೆ-ತುಂಬಲಾಗುವ ಶಿಲ್ಕು ಎಂದರ್ಥ.

**"ಕಾರ್ಡ್‌ದಾರರು"** ಎಂದರೆ ಪ್ರೀಪೇಯ್ಡ್ ಕಾರ್ಡ್ (ಕಾರ್ಡ್‌ಗಳ) ನೀಡಿಕೆಗೆ ಅರ್ಜಿದಾರರು ಸಲ್ಲಿಸಿರುವ ಅರ್ಜಿ ನಮೂನೆಯ ಆಧಾರದ ಮೇಲೆ ಪ್ರೀಪೇಯ್ಡ್ ಕಾರ್ಡ್ ಅನ್ನು (ಕಾರ್ಡ್‌ಗಳನ್ನು) ಯಾವ ವ್ಯಕ್ತಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನೀಡಿರುವುದೋ ಆ ವ್ಯಕ್ತಿ ಎಂದರ್ಥ;

**"ಗ್ರಾಹಕ ಸೇವೆ"** ಎಂದರೆ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಕಾರ್ಡ್‌ದಾರರು ಕೇಳುವ ಯಾವುದೇ ಪ್ರಶ್ನೆಗಳಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಒದಗಿಸುವ ಶುಲ್ಕರಹಿತವಾದ ದೂರವಾಣಿ ಗ್ರಾಹಕ ಸೇವಾ ಸೌಲಭ್ಯವಾಗಿದ್ದು ಸದರಿ ದೂರವಾಣಿ ಸಂಖ್ಯೆಯನ್ನು ಪ್ರೀಪೇಯ್ಡ್ ಕಾರ್ಡಿನ ಹಿಂಭಾಗದಲ್ಲಿ ನಮೂದಿಸಲಾಗಿರುತ್ತದೆ;

**"ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್"** ಹೆಚ್.ಡಿ.ಎಫ್.ಸಿ ಬ್ಯಾಂಕ್ ಸ್ವಾಮ್ಯದ, ಅದರ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿರುವ www.hdfcbank.com ವೆಬ್‌ಸೈಟ್ ಅನ್ನು ಉಲ್ಲೇಖಿಸುತ್ತದೆ.

**"ಕೆವೈಸಿ ಮಾರ್ಗಸೂಚಿಗಳು"** ಎಂದರೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ದಿನಾಂಕ 25, ಫೆಬ್ರವರಿ 2016ರಂದು DBR.AML.BC.No.81/14.01.001/2015-16 ಸಂಖ್ಯೆಯ ಅಡಿಯಲ್ಲಿ ಮಾಸ್ಟರ್ ನಿರ್ದೇಶನ - ನೋ ಯುವರ್ ಕಸ್ಟಮರ್ (ಕೆವೈಸಿ) ನಿರ್ದೇಶನ, 2016 ಎನ್ನುವ ಶೀರ್ಷಿಕೆಯಲ್ಲಿ ಹೊರಡಿಸಿರುವ ಕೇಂದ್ರ (ಮಾಸ್ಟರ್) ನಿರ್ದೇಶನ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೊರಡಿಸಿರುವ ಇತರ ಎಲ್ಲ ಅನ್ವಯವಾಗುವ 'ನಿಮ್ಮ ಗ್ರಾಹಕರನ್ನು ತಿಳಿಯಿರಿ' ನಿರ್ದೇಶನಗಳು ಅಥವಾ ಮಾರ್ಗಸೂಚಿಗಳು ಎಂದು ಅರ್ಥ;

**"ಪಿಪಿಐ ಮಾಸ್ಟರ್ ನಿರ್ದೇಶನಗಳು"** ಎಂದರೆ 'ಪ್ರೀಪೇಯ್ಡ್ ಸಾಧನಗಳ ನೀಡಿಕೆ ಮತ್ತು ಕಾರ್ಯಾಚರಣೆ ಮೇಲೆ ಕೇಂದ್ರ ನಿರ್ದೇಶನಗಳು' ಎನ್ನುವ ಶೀರ್ಷಿಕೆಯ ಅಡಿಯಲ್ಲಿ ಅಕ್ಟೋಬರ್ 11, 2017ರ ದಿನಾಂಕದಲ್ಲಿ RBI/ DPSS/ 2017-18/ 58 ಮಾಸ್ಟರ್ ನಿರ್ದೇಶನ DPSS.CO.PD.No. 1164/02.14.006/2017-18 ಉಲ್ಲೇಖ ಸಂಖ್ಯೆಯೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಕೇಂದ್ರ ನಿರ್ದೇಶನಗಳು ಎಂದರ್ಥ;

**"ಪ್ರೀಪೇಯ್ಡ್ ಕಾರ್ಡ್(ಗಳು)"** ಎಂದರೆ ಈ ಷರತ್ತು ಮತ್ತು ನಿಬಂಧನೆಗಳ ಅನುಸಾರ ಕಾರ್ಡ್‌ದಾರರಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನೀಡಿರುವ 'ಹೆಚ್.ಡಿ.ಎಫ್.ಸಿ ಬ್ಯಾಂಕ್ ಮಿಲೆನಿಯಾ ಪ್ರೀಪೇಯ್ಡ್ ಕಾರ್ಡ್' ಎಂಬ ಹೆಸರಿನ ಓಪನ್-ಲೂಪ್ ಪ್ರೀಪೇಯ್ಡ್ ಕಾರ್ಡ್ ಎಂದರ್ಥ;

**"ವ್ಯವಹಾರ(ಗಳು)"** ಎಂದರೆ, ಮಿತಿಯಿಲ್ಲದಂತೆ, ಪ್ರೀಪೇಯ್ಡ್ ಕಾರ್ಡ್(ಗಳ) ಮುಖಾಂತರ ಹಣವನ್ನು ಪಡೆದುಕೊಳ್ಳಲು ಎಟಿಎಂ ಯಂತ್ರಗಳಲ್ಲಿ ನಡೆಸಲಾಗುವ ವ್ಯವಹಾರವೂ ಸೇರಿದಂತೆ ಪ್ರೀಪೇಯ್ಡ್ ಕಾರ್ಡ್(ಗಳನ್ನು) ಬಳಸಿ ನಡೆಸಲಾಗುವ ಯಾವುದೇ ವ್ಯವಹಾರ(ಗಳು) (ಕಾರ್ಡ್-ಗೈರುಹಾಜರಿ ವ್ಯವಹಾರಗಳೂ ಸೇರಿದಂತೆ) ಎಂದು ಅರ್ಥ.

2. **ಅರ್ಹೈಸುವಿಕೆ**

ಈ ಷರತ್ತು ಮತ್ತು ನಿಬಂಧನೆಗಳಲ್ಲಿ, ಸಂದರ್ಭವು ಅನ್ಯ ಅರ್ಥಗಳನ್ನು ಹೊರಡಿಸದಿದ್ದಲ್ಲಿ:

(a) ಏಕವಚನವು ಬಹುವಚನವನ್ನು ಹಾಗೂ ಬಹುವಚನವು ಏಕವಚನವನ್ನು ಒಳಗೊಳ್ಳುತ್ತದೆ ಮತ್ತು ಯಾವುದೇ ಒಂದು ಲಿಂಗವನ್ನು ಸೂಚಿಸುವ ಪದವು ಇತರ ಲಿಂಗಗಳನ್ನು ಒಳಗೊಳ್ಳುವುದೆಂದು ಪರಿಗಣಿತವಾಗಿರುತ್ತದೆ;

(b) "ಇದಕ್ಕೆ ಸಂಬಂಧಪಟ್ಟ", "ಈ ವಿಷಯದಲ್ಲಿ", "ಈ ಮೂಲಕವಾಗಿ", "ಈ ವಿಷಯಕ್ಕೆ" ಹಾಗೂ ಇವುಗಳ ಜನ್ಯಪದಗಳು ಮತ್ತು ಇದೇ ರೀತಿಯ ಪದಗಳು ಈ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲೇಖಿಸುತ್ತವೆ;

(c) "ಒಳಗೊಳ್ಳುತ್ತವೆ" ಅಥವಾ "ಒಳಗೊಳ್ಳುವ" ಪದಗಳು ಸೂಚಿಸುವ ಉಲ್ಲೇಖಗಳನ್ನು ಯಾವುದೇ ಮಿತಿಯನ್ನು ಆರೋಪಿಸದೆ ಅನ್ವಯಿಸಿಕೊಳ್ಳಬೇಕಾಗುತ್ತದೆ;

(d) ಯಾವುದೇ ಕಂಡಿಕೆಯ ಉಲ್ಲೇಖವು ಈ ಷರತ್ತು ಮತ್ತು ನಿಬಂಧನೆಗಳ ಒಂದು ಕಂಡಿಕೆ ಎಂದು ಅರ್ಥೈಸಬೇಕಾಗುತ್ತದೆ;

(e) ಯಾವುದೇ ಶಾಸನ, ಕಾನೂನು, ಸುತ್ತೋಲೆ ಅಥವಾ ನಿಬಂಧನೆಯ ಅಥವಾ ಯಾವುದೇ ಸಂವಾದಿ ಉಪಬಂಧದ ಉಲ್ಲೇಖವು, ಸಂದರ್ಭಾನುಸಾರ, ಸಂಬಂಧಪಟ್ಟ ದಿನಾಂಕದ ನಂತರದಲ್ಲಿ, ಕಾಲದಿಂದ ಕಾಲಕ್ಕೆ ಅಂತಹ ಯಾವುದೇ ಶಾಸನ, ಕಾನೂನು, ಸುತ್ತೋಲೆ ಅಥವಾ ನಿಬಂಧನೆಯಲ್ಲಿ ಮಾಡಲಾದ ತಿದ್ದುಪಡಿ, ಸೇರಿಸಲಾದ ಪೂರಕಾಂಶಗಳು ಮತ್ತು ಮರುಕಾನೂನುಗಳ ಉಲ್ಲೇಖಗಳನ್ನು ಒಳಗೊಳ್ಳುತ್ತದೆ ಹಾಗೂ ಶಾಸನಬದ್ಧ ಉಪಬಂಧವೊಂದರ ಯಾವುದೇ ಉಲ್ಲೇಖವು ಆ ಉಪಬಂಧದ ಅಡಿಯಲ್ಲಿ ಕಾಲದಿಂದ ಕಾಲಕ್ಕೆ ಮಾಡಲಾದ ಅಧೀನ ಶಾಸನವನ್ನು ಒಳಗೊಳ್ಳುತ್ತದೆ;

(f) "ವ್ಯಕ್ತಿ" ಎನ್ನುವ ಪದವು ಓರ್ವ ವ್ಯಕ್ತಿ, ಪಾಲುದಾರ ಸಂಸ್ಥೆ, ನಿಯಮಿತ ಹೊಣೆಯ ಪಾಲುದಾರಿಕೆ, ಕಂಪನಿ (ಕಂಪನಿ ಕಾಯ್ದೆ, 2013ರ ಪರಿಚ್ಛೇದ 2(11) ರ ಅಡಿಯಲ್ಲಿ ನಿರ್ವಚಿಸಲಾದಂತೆ), ನಿಗಮನಗೊಂಡ ನಿಕಾಯ (ಕಂಪನಿ ಕಾಯ್ದೆ, 2013ರ ಪರಿಚ್ಛೇದ 2(11) ರ ಅಡಿಯಲ್ಲಿ ನಿರ್ವಚಿಸಲಾದಂತೆ), ಸಹಕಾರಿ ಸಂಘ, ಟ್ರಸ್ಟ್, ನಿಗಮನವಾಗಿರುವ ಅಥವಾ ಆಗಿರದ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ ಮತ್ತು ಇತರ ಯಾವುದೇ ಬಗೆಯ ಸಂಸ್ಥೆಗಳನ್ನೂ ಒಳಗೊಳ್ಳುವುದಿಲ್ಲ.

(g) ಶೀರ್ಷಿಕೆ ಮತ್ತು ದಪ್ಪ ಅಕ್ಷರ ವಿನ್ಯಾಸವನ್ನು ಅನುಕೂಲದ ದೃಷ್ಟಿಯಿಂದ ಮಾತ್ರ ಬಳಸಲಾಗಿದ್ದು, ಈ ಷರತ್ತು ಮತ್ತು ನಿಬಂಧನೆಗಳ ಅರ್ಥೈಸುವಿಕೆಯನ್ನು ಇದು ಯಾವ ರೀತಿಯಲ್ಲಿಯೂ ಪ್ರಭಾವಿಸುವುದಿಲ್ಲ.

## 3. ಪ್ರೀಪೇಯ್ಡ್ ಕಾರ್ಡ್ ವಿತರಣೆಗೆ ಅರ್ಜಿ

3.1 ಪ್ರೀಪೇಯ್ಡ್ ಕಾರ್ಡ್ ನೀಡಿಕೆಗೆ ಸಂಬಂಧಿಸಿದಂತೆ, ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ ಸಂಪೂರ್ಣವಾದ ಅರ್ಜಿ ನಮೂನೆಯನ್ನು ಸಲ್ಲಿಸಬೇಕಾಗುತ್ತದೆ ಹಾಗೂ ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕೆಂದು ಹೆಚ್.ಡಿ.ಎಫ್.ಸಿ ಬ್ಯಾಂಕ್ ತಿಳಿಸುವ ಮಾಹಿತಿ/ದಾಖಲೆಗಳನ್ನು, ಯಾರಿಗೆ ಪ್ರೀಪೇಯ್ಡ್ ಕಾರ್ಡ್ ನೀಡಿಕೆಯು ಅಗತ್ಯವಾಗಿರುವುದೋ ಆ ವ್ಯಕ್ತಿಗೆ ಸಂಬಂಧಿಸಿದಂತೆ ಹೆಚ್‌ಡಿಎಫ್‌ಸಿ ಬ್ಯಾಂಕ್‌ಗೆ ಅಗತ್ಯವಾದ ಮಾಹಿತಿ ಮತ್ತು ದಾಖಲೆಗಳನ್ನು, ಯಾವುದೇ ಮಿತಿಯಿರದಂತೆ, ಸಲ್ಲಿಸಬೇಕಾಗುತ್ತದೆ.

3.2 ಅರ್ಜಿದಾರರು, ಮೇಲಿನ ಕಂಡಿಕೆ 3.1ರಲ್ಲಿ ಹೇಳಿರುವಂತೆ ಅರ್ಜಿ ನಮೂನೆ ಮತ್ತು ದಾಖಲೆಗಳನ್ನು ಸಲ್ಲಿಸಬೇಕಾದ ಸಮಯದಲ್ಲಿ, ಹೆಚ್.ಡಿ.ಎಫ್.ಸಿ ಬ್ಯಾಂಕ್ ಈ ಸಂಬಂಧವಾಗಿ ನಿಗದಿಪಡಿಸಿರುವ ವಿಧಾನಕ್ಕೆ ಅನುಸಾರವಾಗಿ ಹಾಗೂ ಅನ್ವಯವಾಗುವ ಕಾನೂನಿಗೆ ಅನುಗುಣವಾಗಿ (ಮಿತಿಯಿರದಂತೆ, ಪಿಪಿಐ ಮಾಸ್ಟರ್ ನಿರ್ದೇಶನಗಳೂ ಸೇರಿದಂತೆ) ಕಾರ್ಡ್‌ದಾರರಿಗೆ ನೀಡಬೇಕಿರುವ ಪ್ರೀಪೇಯ್ಡ್ ಕಾರ್ಡ್‌ಗೆ ಲೋಡ್ ಮಾಡಬೇಕಿರುವ ಮೊತ್ತವನ್ನು ಪಾವತಿಸಬೇಕಾಗುತ್ತದೆ.

3.3 ಹೆಚ್.ಡಿ.ಎಫ್.ಸಿ ಬ್ಯಾಂಕ್ ತನ್ನದೇ ಸಂಪೂರ್ಣವಾದ ವಿವೇಚನೆಯಲ್ಲಿ ಮತ್ತು ಬ್ಯಾಂಕ್ ಕಾಲದಿಂದ ಕಾಲಕ್ಕೆ ನಿಗದಿಪಡಿಸುವ ನಿಯಮಗಳು ಮತ್ತು ಷರತ್ತುಗಳು ಹಾಗೂ ಇತರ ಔಪಚಾರಿಕತೆಗಳನ್ನು ಪೂರೈಸಿದ ನಂತರ ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡ್ ಅನ್ನು ನೀಡಬಹುದಾಗಿದೆ. ಪ್ರೀಪೇಯ್ಡ್ ಕಾರ್ಡ್ ನೀಡಿಕೆ ಹೆಚ್.ಡಿ.ಎಫ್.ಸಿ ಬ್ಯಾಂಕಿನದ್ದೇ ವಿಶೇಷಾಧಿಕಾರವಾಗಿರುವ ಅಂಶವನ್ನು ಮತ್ತು ಈ ಷರತ್ತು ಮತ್ತು ನಿಬಂಧನೆಗಳಲ್ಲಿ ಹೇಳಲಾಗಿರುವ ಯಾವುದೇ ಅಂಶವೂ (ಮಿತಗೊಳ್ಳದಂತೆ, ಅರ್ಜಿ ನಮೂನೆಯ ಸಲ್ಲಿಕೆ ಮತ್ತು/ಅಥವಾ ಮೇಲಿನ ಕಂಡಿಕೆ 3.2ರಲ್ಲಿ ಹೇಳಲಾಗಿರುವಂತೆ, ಪ್ರೀಪೇಯ್ಡ್

ಕಾರ್ಡ್‌ಗೆ ಮೊತ್ತಗಳನ್ನು ಲೋಡ್ ಮಾಡುವುದೂ ಸೇರಿದಂತೆ) ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡ್ ಅನ್ನು ನೀಡುವಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಅನ್ನು ಬಾಧ್ಯವಾಗಿಸುವ ರೀತಿಯಲ್ಲಿ ಅರ್ಥೈಸಲಾಗದು ಎನ್ನುವ ಅಂಶವನ್ನು ಅರ್ಜಿದಾರರು ಗುರುತಿಸಿ ಒಪ್ಪಬೇಕಾಗುತ್ತದೆ.

3.4 ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಹೆಚ್.ಡಿ.ಎಫ್.ಸಿ ಬ್ಯಾಂಕಿನಿಂದ ತಿರಸ್ಕೃತವಾದ ಪಕ್ಷದಲ್ಲಿ, ಅರ್ಜಿದಾರರು ಪಾವತಿಸಿರುವ ಮೊತ್ತವನ್ನು (ಮೊತ್ತವನ್ನು ಪಾವತಿಸಿದ್ದಲ್ಲಿ) ಹೆಚ್.ಡಿ.ಎಫ್.ಸಿ ಬ್ಯಾಂಕ್ ಮರುಭರಿಸುತ್ತದೆ ಮತ್ತು ಇಂತಹ ಮೊತ್ತವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಖಾತೆಗೆ ಯಾವ ಖಾತೆಯಿಂದ ಜಮೆಯಾಗಿತ್ತೋ ಆ ಖಾತೆಗೆ ಜಮಾ ಮಾಡಲಾಗುತ್ತದೆ.

4. **ಪ್ರೀಪೇಯ್ಡ್ ಕಾರ್ಡ್ ಅನ್ನು ಸಕ್ರಿಯಗೊಳಿಸುವುದು**

4.1 ಪ್ರೀಪೇಯ್ಡ್ ಕಾರ್ಡ್ ನೀಡಿಕೆಯ ದಿನಾಂಕದಂದು ಇದ್ದಂತೆ ಕಾರ್ಯಯುಕ್ತವಲ್ಲದ ಸ್ಥಿತಿಯಲ್ಲಿ ಇರುತ್ತದೆ ಮತ್ತು ಮೇಲಿನ ಕಂಡಿಕೆ 3.2ರ ಅನ್ವಯ ಪ್ರೀಪೇಯ್ಡ್ ಕಾರ್ಡ್‌ಗೆ ಲೋಡ್ ಮಾಡಲಾದ ಮೌಲ್ಯವನ್ನು ಪ್ರೀಪೇಯ್ಡ್ ಕಾರ್ಡ್ ಷರತ್ತುಗಳ ಅನುಸಾರ ಕಾರ್ಯಯುಕ್ತವಾಗದ ಹೊರತು ಬಳಸಲಾಗುವುದಿಲ್ಲ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸಿ ಒಪ್ಪಬೇಕಾಗುತ್ತದೆ.

4.2 ಪ್ರೀಪೇಯ್ಡ್ ಕಾರ್ಡ್ ಅನ್ನು ಈ ಮುಂದಿನ ಅಂಶಗಳಿಗೆ ಬದ್ಧವಾಗಿ ಕಾರ್ಯಯುಕ್ತಗೊಳಿಸಲಾಗುತ್ತದೆ: (a) ತನ್ನ "ನಿಮ್ಮ ಗ್ರಾಹಕರನ್ನು ತಿಳಿಯಿರಿ" (**ಕೆವೈಸಿ**) ಪರೀಕ್ಷೆಗಳನ್ನು ನಡೆಸಲು ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಅಗತ್ಯವಾಗುವ ದಾಖಲೆಗಳು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಅಗತ್ಯವಾದ ಇತರ ಯಾವುದೇ ದಾಖಲೆಗಳನ್ನು ಕಾರ್ಡ್‌ದಾರರು ಮತ್ತು ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ (ಮತ್ತು/ಅಥವಾ ಅದರ ಪರವಾಗಿ ವ್ಯಾಪಾರ ನಡೆಸುವವರಿಗೆ) ಒದಗಿಸಿದ ನಂತರ; (b) ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾರ್ಡ್‌ದಾರರು ಮತ್ತು ಅರ್ಜಿದಾರರಿಗೆ ಸಂಬಂಧಿಸಿದಂತೆ ಕೆವೈಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದ ನಂತರ; ಮತ್ತು (c) ಕಾರ್ಡ್‌ದಾರರು ವೆಬ್ ಅರ್ಜಿ ಅಥವಾ ವೆಬ್ ಲಿಂಕ್ ಲಭ್ಯಾವಕಾಶವನ್ನು ಪಡೆದುಕೊಂಡು ಪ್ರೀಪೇಯ್ಡ್ ಕಾರ್ಡ್ ಸ್ವೀಕೃತಿಯನ್ನು ಸ್ಥಿರೀಕರಿಸುವುದು ಮತ್ತು ಈ ಸಂಬಂಧವಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಅಗತ್ಯವಾಗಿರುವ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಿದ ನಂತರ.

4.3 ಇಲ್ಲಿ ಹೇಳಿರುವುದಕ್ಕೆ ವ್ಯತಿರಿಕ್ತವಾಗಿ ಏನೇ ಇದ್ದರೂ, ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಒದಗಿಸಿರುವ ಕೆವೈಸಿ ಯಲ್ಲಿ ಯಾವುದೇ ಅಸಾಂಗತ್ಯವಿದ್ದಲ್ಲಿ ಅಥವಾ ಈ ಷರತ್ತು ಮತ್ತು ನಿಬಂಧನೆಗಳನ್ನು, ಕೆವೈಸಿ ಮಾರ್ಗಸೂಚಿಗಳನ್ನು ಮತ್ತು/ಅಥವಾ ಪಿಪಿಐ ಕೇಂದ್ರ ನಿರ್ದೇಶನಗಳನ್ನು ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಅನುಪಾಲಿಸದೇ ಇದ್ದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರೀಪೇಯ್ಡ್ ಕಾರ್ಡ್ ಅನ್ನು ತಕ್ಷಣವೇ ರದ್ದುಪಡಿಸುವ/ಬ್ಲಾಕ್ ಮಾಡುವ ಸಂಪೂರ್ಣವಾದ ವಿವೇಚನೆಯನ್ನು ಹೊಂದಿರುತ್ತದೆ ಹಾಗೂ ಈ ಸಂಬಂಧವಾಗಿ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಗೆ ಆಗುವ ಅನನುಕೂಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಜವಾಬ್ದಾರಿಯನ್ನು ಹೊರುವುದಿಲ್ಲ ಎನ್ನುವ ಅಂಶವನ್ನು ಕಾರ್ಡ್‌ದಾರರು ಮತ್ತು ಅರ್ಜಿದಾರರು ಗುರುತಿಸಿ ಒಪ್ಪಬೇಕಾಗುತ್ತದೆ.

## 5. ಪ್ರೀಪೇಯ್ಡ್ ಕಾರ್ಡ್ ಅನ್ನು ರೀಲೋಡ್ ಮಾಡುವುದು

5.1 ಕಾರ್ಡ್‌ದಾರರು ಮತ್ತು ಅರ್ಜಿದಾರರು ಪ್ರೀಪೇಯ್ಡ್ ಕಾರ್ಡ್‌ಗೆ ಮೌಲ್ಯವನ್ನು ಮರುಲೋಡ್ ಮಾಡುವುದಕ್ಕೆ ಸಂಬಂಧಿಸಿದಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಗದಿಪಡಿಸಿರುವ ಎಲ್ಲ ಅಗತ್ಯ ಪ್ರಕ್ರಿಯೆಗಳು ಮತ್ತು ವಿಧಾನಗಳನ್ನು ಹಾಗೂ ಅನ್ವಯವಾಗು ಕಾನೂನಿನ (ಮಿತಗೊಳ್ಳದಂತೆ, ಪಿಪಿಐ ಕೇಂದ್ರ ನಿರ್ದೇಶನಗಳು ಸೇರಿದಂತೆ) ಎಲ್ಲ ಅನ್ವಯವಾಗುವ ಅಗತ್ಯಗಳನ್ನೂ ಪಾಲಿಸಲು ಒಪ್ಪುತ್ತಾರೆ.

5.2 ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಪ್ರೀಪೇಯ್ಡ್ ಕಾರ್ಡ್ ಅನ್ನು ಲೋಡ್ ಮಾಡಲು/ ರೀಲೋಡ್ ಮಾಡಲು https://securepayments.payu.in/hdfcforex-home - ಈ ವೆಬ್‌ಸೈಟ್‌ಗೆ ಹೋಗಬಹುದಾಗಿದೆ. ಪಿಪಿಐ ಕೇಂದ್ರ ನಿರ್ದೇಶನಗಳ ಅಡಿಯಲ್ಲಿ ಸದರಿ ಪ್ರೀಪೇಯ್ಡ್ ಕಾರ್ಡ್ ವಿಧಗಳಿಗೆ ನಿದಿಪಡಿಸಿರುವ ಮಿತಿಗಳನ್ನು ಮೀರದಂತೆ ದಂತೆ ಪ್ರೀಪೇಯ್ಡ್ ಕಾರ್ಡ್‌ಗಳಿಗೆ ಮರು-ಲೋಡಿಂಗ್‌ಗೆ ಅನುಮತಿಯನ್ನು ನೀಡಲಾಗುವುದು.

## 6. ಕಾರ್ಡ್‌ದಾರರಿಂದ ಪ್ರೀಪೇಯ್ಡ್ ಕಾರ್ಡ್‌ಗಳ ಬಳಕೆ

6.1 ಕಾರ್ಡ್‌ದಾರರು ಮತ್ತು ಅರ್ಜಿದಾರರು ಕೆಳಗಿನವುಗಳನ್ನು ಗುರುತಿಸಿ ಒಪ್ಪಬೇಕಾಗುತ್ತದೆ.

(a) ಪ್ರೀಪೇಯ್ಡ್ ಕಾರ್ಡ್ ಭಾರತದಲ್ಲಿ ಮಾತ್ರ ಮತ್ತು ಭಾರತೀಯ ರೂಪಾಯಿಗಳಲ್ಲಿ ಮಾಡಬೇಕಿರುವ ಪಾವತಿಗಳಿಗೆ ಸಂಬಂಧಿಸಿದಂತೆ ಮಾತ್ರ ಚಲಾವಣೆಯನ್ನು ಹೊಂದಿರುತ್ತದೆ;

(b) ಪ್ರೀಪೇಯ್ಡ್ ಕಾರ್ಡ್ ವರ್ಗಾವಣೆಗೆ ಕಟ್ಟುನಿಟ್ಟಾಗಿ ಅವಕಾಶವಿರುವುದಿಲ್ಲ ಮತ್ತು ಕಾರ್ಡ್ ಹೆಚ್.ಡಿ.ಎಫ್.ಸಿ ಬ್ಯಾಂಕಿನ ಸ್ವತ್ತಾಗಿರುತ್ತದೆ;

(c) ಯಾವುದೇ ನಿರ್ದಿಷ್ಟ ಸಮಯದಲ್ಲಿ ಕಾರ್ಡ್ ಶಿಲ್ಕಿನ ಮಟ್ಟಿಗೆ ಮಾತ್ರ ಪ್ರೀಪೇಯ್ಡ್ ಕಾರ್ಡ್ ಅನ್ನು ಬಳಸಲು ಕಾರ್ಡ್‌ದಾರರಿಗೆ ಅವಕಾಶವಿರುತ್ತದೆ.

(d) ಕಾರ್ಡ್ ಶಿಲ್ಕಿನ ಮೇಲೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ಬಡ್ಡಿಯನ್ನು ಪಾವತಿಸಲು ಬದ್ಧವಾಗಿರುವುದಿಲ್ಲ.

(e) ಕಾರ್ಡ್‌ದಾರರು ಮತ್ತು ಅರ್ಜಿದಾರರು ಅನ್ವಯವಾಗುವ ಎಲ್ಲ ಕಾನೂನುಗಳನ್ನೂ ಪಾಲಿಸಬೇಕಾಗುತ್ತದೆ.

6.2 ಪ್ರೀಪೇಯ್ಡ್ ಕಾರ್ಡ್ ಬಳಕೆಯನ್ನು ಈ ನಿಯಮಗಳು ಮತ್ತು ಷರತ್ತುಗಳು ಹಾಗೂ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾಲದಿಂದ ಕಾಲಕ್ಕೆ ಒದಗಿಸುವ ಎಲ್ಲ ನೀತಿಗಳು, ಮಾರ್ಗಸೂಚಿಗಳು ಮತ್ತು ಸೂಚನೆಗಳು ನಿರ್ದೇಶಿಸುತ್ತವೆ. ಕಾರ್ಡ್‌ದಾರರು ವ್ಯವಹಾರವೊಂದಕ್ಕೆ ಪ್ರತಿಬಾರಿ ಪ್ರೀಪೇಯ್ಡ್ ಕಾರ್ಡ್ ಅನ್ನು ಬಳಸಿದಾಗ, ಕಾರ್ಡ್ ಶಿಲ್ಕು ವ್ಯವಹಾರದ ಮೌಲ್ಯದಷ್ಟು ತಗ್ಗುವುದು ಎನ್ನುವದನ್ನು ಕಾರ್ಡ್‌ದಾರರು ಗುರುತಿಸುತ್ತಾರೆ. ಇಲ್ಲಿ ಹೇಳಿರುವುದಕ್ಕೆ ವ್ಯತಿರಿಕ್ತವಾಗಿ ಏನೇ ಇದ್ದರೂ, ಹೆಚ್.ಡಿ.ಎಫ್.ಸಿ ಬ್ಯಾಂಕ್ ತನ್ನ ವಿವೇಚನೆಯನ್ನು ಬಳಸಿಕೊಂಡು, ಯಾವುದೇ ಕಾರಣವನ್ನೂ ನೀಡದೆ, ವ್ಯವಹಾರವೊಂದನ್ನು ಪೂರ್ಣಗೊಳಿಸಲು ಅಗತ್ಯವಾದ ಪರ್ಯಾಪ್ತ ಕಾರ್ಡ್ ಶಿಲ್ಕು ಇದ್ದರೂ, ಪ್ರೀಪೇಯ್ಡ್ ಕಾರ್ಡ್ ಬಳಸಿ ಮಾಡಲು ಉದ್ದೇಶಿಸುವ ಯಾವುದೇ ವ್ಯವಹಾರವನ್ನು ಒಪ್ಪದೇ ಇರಬಹುದಾಗಿದೆ. ಪ್ರೀಪೇಯ್ಡ್ ಕಾರ್ಡ್ ಹೆಚ್.ಡಿ.ಎಫ್.ಸಿ ಬ್ಯಾಂಕಿನ ಎಲ್ಲ ಆಟೊಮೇಟೆಡ್ ಟೆಲ್ಲರ್ ಯಂತ್ರಗಳಲ್ಲಿ (ಎಟಿಎಂ) ಅಥವಾ ಭಾರತದಲ್ಲಿ ವೀಸಾ/ಮಾಸ್ಟರ್ /ರೂಪೇ ಜಾಲಬಂಧದ ಸದಸ್ಯತ್ವವನ್ನು ಹೊಂದಿರುವ ಇತರ ಬ್ಯಾಂಕುಗಳ ಆಟೊಮೇಟೆಡ್ ಟೆಲ್ಲರ್ ಯಂತ್ರಗಳಲ್ಲಿ ಸ್ವೀಕೃತವಾಗುತ್ತವೆ.

6.3 ಪ್ರೀಪೇಯ್ಡ್ ಕಾರ್ಡ್ ಮೂಲಕ ವ್ಯವಹಾರವೊಂದನ್ನು (ಆಟೊಮೇಟೆಡ್ ಟೆಲ್ಲರ್ ಯಂತ್ರಗಳಲ್ಲಿನ ಹಣವನು ಹಿಂಪಡೆಯುವ ವ್ಯವಹಾರಗಳನ್ನು ಬಿಟ್ಟು ಉಳಿದವು) ಮಾಡುವ ಮತ್ತು ಅದನ್ನು ಅಧಿಕೃತಗೊಳಿಸುವ ಪ್ರಕ್ರಿಯೆಯಲ್ಲಿ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಒದಗಿಸಲಾಗಿರುವ ವ್ಯವಹಾರ ನಿರ್ದಿಷ್ಟ ವೈಯಕ್ತಿಕ ಗುರುತಿನ ಸಂಖ್ಯೆ **(ಕಾರ್ಡ್ ಪಿನ್)** ಅಗತ್ಯವಾಗಿರುತ್ತದೆ ಎನ್ನುವ ಅಂಶವನ್ನು ಹಾಗೂ ಎಟಿಎಂ ಗಳಲ್ಲಿ ಹಣವನ್ನು ಹಿಂಪಡೆಯಲು ಆಟೊಮೇಟೆಡ್ ಟೆಲ್ಲರ್ ಯಂತ್ರಗಳಿಂದ ಹಣವನ್ನು ಹಿಂಪಡೆಯುವ ವ್ಯವಹಾರಗಳನ್ನು ನಡೆಸಲು ಒದಗಿಸಲಾಗಿರುವ ವೈಯಕ್ತಿಕ ಗುರುತಿನ ಸಂಖ್ಯೆಯು ("**ಎಟಿಎಂ ಪಿನ್**") ಅಗತ್ಯವಾಗಿರುತ್ತದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸುತ್ತಾರೆ (ಕಾರ್ಡ್ ಪಿನ್ ಮತ್ತು ಎಟಿಎಂ ಪಿನ್ ಗಳನ್ನು ಇಲ್ಲಿಂದ ಮುಂದೆ ಒಟ್ಟಾಗಿ **"ಪಿನ್"** ಎಂದು ಉಲ್ಲೇಖಿಸಲಾಗಿದೆ). ಪಿನ್ ಅನ್ನು ಕಾರ್ಡ್‌ದಾರರಿಗೆ ಮಾತ್ರ ನೀಡಲಾಗುವುದು. ಕಾರ್ಡ್‌ದಾರರು ಪಿನ್ ಅನ್ನು ಗೋಪ್ಯವಾಗಿ ಮತ್ತು ಅತ್ಯಂತ ಸುರಕ್ಷಿತವಾಗಿ ಇರಿಸಿಕೊಳ್ಳಬೇಕು ಹಾಗೂ ಹೆಚ್.ಡಿ.ಎಫ್.ಸಿ ನೌಕರರು ಮತ್ತು ಪ್ರತಿನಿಧಿಗಳು ಸೇರಿದಂತೆ ಯಾರಿಗೂ ಅದನ್ನು ತಿಳಿಸಬಾರದು. ಯಾವುದೇ ಮೂರನೆಯ ವ್ಯಕ್ತಿಗೆ ಕಾರ್ಡ್‌ದಾರರು ಪಿನ್ ಬಹಿರಂಗಪಡಿಸಿದ ಕಾರಣದಿಂದಾಗಿ ಮತ್ತು/ಅಥವಾ ಪಿನ್ಗಳನ್ನು ಪಡೆದ ಯಾರಾದರೂ ವ್ಯಕ್ತಿಯು ಅದರ ಅಪಬಳಕೆಯನ್ನು ಮಾಡಿದ ಕಾರಣದಿಂದಾಗಿ ಕಾರ್ಡ್‌ದಾರರಿಗೆ ಉಂಟಾಗುವ ಯಾವುದೇ ನಷ್ಟಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಜವಾಬ್ದಾರರಾಗುವುದಿಲ್ಲ. ಯಾವುದೇ ಸಮಯದಲ್ಲಾಗಲೀ ವ್ಯವಹಾರಗಳನ್ನು ಅಧಿಕೃತಗೊಳಿಸಲು ಹೆಚ್.ಡಿ.ಎಫ್.ಸಿ ಬ್ಯಾಂಕ್ ಇತರ ತಂತ್ರಜ್ಞಾನಗಳ ಅನುಸರಣೆಯನ್ನು ಕಾರ್ಡ್‌ದಾರರಿಗೆ ಅಗತ್ಯವಾಗಿಸಬಹುದಾಗಿದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸುತ್ತಾರೆ ಮತ್ತು ಈ ಸಂಬಂಧವಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಅಗತ್ಯವಾಗಿಸುವ ಎಲ್ಲ ಕಾರ್ಯಗಳು, ಕೃತ್ಯಗಳು ಮತ್ತು ಸಂಗತಿಗಳನ್ನು ನಡೆಸಲು ಕಾರ್ಡ್‌ದಾರರು ಒಪ್ಪಿ ನಡೆಸುವುದನ್ನು ಅಂಗೀಕರಿಸುತ್ತಾರೆ.

6.4 ಕಾರ್ಡ್‌ದಾರರು ಕೆಳಗಿನ ಅಂಶಗಳನ್ನು ಖಾತ್ರಿಪಡಿಸಿಕೊಳ್ಳಬೇಕು:

(a) ಪ್ರೀಪೇಯ್ಡ್ ಕಾರ್ಡ್ ಸುರಕ್ಷಿತವಾದ ಸ್ಥಳದಲ್ಲಿ ಇರಿಸುವುದು;

(b) ಪ್ರೀಪೇಯ್ಡ್ ಕಾರ್ಡ್ ಅನ್ನು ಇತರ ಯಾವುದೇ ವ್ಯಕ್ತಿಯು ಬಳಸಲು ಅವಕಾಶ ನೀಡದಿರುವುದು;

(c) ಕಾರ್ಡ್ ಅನ್ನು ಪಡೆದ ತಕ್ಷಣ ಅದರ ಹಿಂಭಾಗದಲ್ಲಿ ಸಹಿಮಾಡುವುದು;

(d) ಪಿನ್ ಅನ್ನು ಯಾವುದೇ ವ್ಯಕ್ತಿಗೆ ತಿಳಿಸದೆ ಇರುವುದು ಅಥವಾ ಯಾರಾದರೂ ಇತರ ವ್ಯಕ್ತಿಯು ಪತ್ತೆಮಾಡಲು ಸಾಧ್ಯವಾಗುವಂತೆ ಅದನ್ನು ಬರೆದು ಇಡದಿರುವುದು;

(e) ಪ್ರೀಪೇಯ್ಡ್ ಕಾರ್ಡ್ ಅನ್ನು ಹೋಟೆಲ್‌ಗಳಲ್ಲಿ ಪ್ರವೇಶ ಪ್ರಕ್ರಿಯೆಯ ಸಂದರ್ಭದಲ್ಲಿ ಬಳಸಬಾರದು ಮತ್ತು ವ್ಯಾಪಾರ ವ್ಯವಹಾರ ಅಥವಾ ಸೇವೆಯು ಪೂರ್ಣಗೊಳ್ಳುವ ಮುನ್ನವೇ ಪಾವತಿಯ ವ್ಯವಸ್ಥೆಯನ್ನು ಮಾಡುವ ಸ್ಥಳಗಳಲ್ಲಿ ಬಳಸಬಾರದು. ಪ್ರೀಪೇಯ್ಡ್ ಕಾರ್ಡ್ ಅನ್ನು ಯಾವುದೇ ಅಂಚೆ ಆದೇಶ/ಫೋನ್ ಆದೇಶದ ಖರೀದಿಗಳಿಗೆ ಬಳಸಬಾರದು;

(f) ಅರ್ಜಿ ನಮೂನೆಯಲ್ಲಿ ನಿರ್ದಿಷ್ಟಗೊಳಿಸಲಾಗಿರುವ ವಿಳಾಸಕ್ಕೆ ಪ್ರೀಪೇಯ್ಡ್ ಕಾರ್ಡ್/ಪಿನ್ ತಲುಪಿಸಿದ ನಂತರ, ಪ್ರೀಪೇಯ್ಡ್ ಕಾರ್ಡ್ ಅಪಬಳಕೆಯ ಜವಾಬ್ದಾರಿಯು ಕಾರ್ಡ್‌ದಾರರದ್ದಾಗಿರುತ್ತದೆ, ಹೆಚ್.ಡಿ.ಎಫ್.ಸಿ ಬ್ಯಾಂಕ್‌ನದ್ದಲ್ಲ.

6.5 ಕಾರ್ಡ್‌ದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾಲದಿಂದ ಕಾಲಕ್ಕೆ, ತನ್ನ ಆಂತರಿಕ ನೀತಿಗೆ ಅನುಸಾರವಾಗಿ ಯಾವುದೇ ನಿರ್ದಿಷ್ಟ ದಿನವೊಂದರಲ್ಲಿ ಅಥವಾ ಇತರ ಆವರ್ತನ ಮಿತಿಯೊಂದಿಗೆ ನಡೆಸಬಹುದಾದ ವ್ಯವಹಾರಗಳ ಮೊತ್ತದ ಮೇಲೆ ಆರ್ಥಿಕ ಮಿತಿಗಳನ್ನು ವಿಧಿಸಬಹುದಾಗಿದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸಿ ಒಪ್ಪಬೇಕಾಗುತ್ತದೆ. ಕಾರ್ಡ್‌ದಾರರಿಗೆ ಇಂತಹ ಮಿತಿಗಳನ್ನು ಕುರಿತಂತೆ, ಈ ಮುಂಚಿತವಾಗಿ ಸಂವಹನ ನಡೆಸಿರುವುದೋ ಇಲ್ಲವೋ ಎನ್ನುವುದನ್ನು ಗಣಿಸದೆ, ಇಂತಹ ಮಿತಿಗಳನ್ನು ಮೀರಿದ ಯಾವುದೇ ವ್ಯವಹಾರವನ್ನು ಸಂಸ್ಕರಿಸದೆ ಇರುವ ಹಕ್ಕನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಹೊಂದಿರುತ್ತದೆ ಎನ್ನುವ ಅಂಶವನ್ನು ಕಾರ್ಡದಾರರು ಗುರುತಿಸಿ ಒಪ್ಪುತ್ತಾರೆ. ಕಾಲದಿಂದ ಕಾಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಬಯಸುವ ವಿವರಗಳನ್ನು ಒದಗಿಸುವ ಮೂಲಕ ಕಾರ್ಡ್‌ದಾರರು ಫಲಾನುಭವಿಗಳನ್ನು ನೋಂದಾಯಿಸಬಹುದಾಗಿದೆ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾಲದಿಂದ ಕಾಲಕ್ಕೆ ನಿಗದಿಪಡಿಸುವ ವಿಧಾನದಲ್ಲಿ, ಅನ್ವಯವಾಗುವ ಕಾನೂನು ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನ ಆಂತರಿಕ ನೀತಿಗಳು ಮತ್ತು ಕಾರ್ಯವಿಧಾನಗಳಿಗೆ ಬದ್ಧವಾಗಿ ಕಾರ್ಡ್‌ದಾರರು ಪ್ರೀಪೇಯ್ಡ್ ಕಾರ್ಡ್ ಮೇಲೆ ತಮ್ಮದೇ ಆಯ್ಕೆಯ ನಿಧಿ ವರ್ಗಾವಣೆ ಮಿತಿಗಳನ್ನು ನಿಗದಿಪಡಿಸಬಹುದಾಗಿದೆ.

6.6 ಕಾರ್ಡ್‌ದಾರರಿಗೆ, ವೈಯಕ್ತಿಕ ವ್ಯವಹಾರದ ಮೂಲಕವಾಗಲೀ ಅಥವಾ ವ್ಯವಹಾರಗಳ ಸರಣಿಯ ಮೂಲಕವಾಗಲೀ, ಲಭ್ಯವಿರುವ ಕಾರ್ಡ್ ಶಿಲ್ಕುನ್ನು

ಮೀರಲು ಅವಕಾಶವಿರುವುದಿಲ್ಲ. ಪಾವತಿಸಬೇಕಾದ ಮೊತ್ತಗಳು ಕಾರ್ಡ್ ಶಿಲ್ಕನ್ನು ಮೀರಿ ಇರುವ ಸಂದರ್ಭಗಳಲ್ಲಿ ಕಾರ್ಡ್‌ದಾರರು ವ್ಯವಹಾರವೊಂದನ್ನು ನಡೆಸಲು ಪ್ರಯತ್ನಿಸಿದಲ್ಲಿ ಕಾರ್ಡ್‌ದಾರ ವ್ಯವಹಾರವನ್ನು ನಡೆಸಲು ಸಾಧ್ಯವಿರುವುದಿಲ್ಲ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸಿ ಒಪ್ಪುತ್ತಾರೆ. ಯಾವುದೇ ಸಂದರ್ಭದಲ್ಲಿ, ಯಾವುದೇ ಕಾರಣಕ್ಕಾಗಿ, ಮೊತ್ತವು ಕಾರ್ಡ್ ಶಿಲ್ಕನ್ನು ಮೀರಿದ್ದು ಅಂತಹ ವ್ಯವಹಾರವು ಒಪ್ಪಿತವಾಗಿದ್ದು ಅದೇ ಕಾರಣದಿಂದಾಗಿ ಋಣಾತ್ಮಕವಾದ ಕಾರ್ಡ್ ಶಿಲ್ಕನ್ನು ಉಂಟುಮಾಡಿದಲ್ಲಿ, ಕಾರ್ಡ್‌ದಾರರು ಇಂತಹ ಋಣಾತ್ಮಕ ಕಾರ್ಡ್ ಶಿಲ್ಕಿನ ಮೊತ್ತವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ ಪಾವತಿಸಲು ಬದ್ಧವಾಗಿರುತ್ತಾರೆ ಹಾಗೂ ಋಣಾತ್ಮಕ ಕಾರ್ಡ್ ಶಿಲ್ಕಿನ ಸೃಷ್ಟಿಯ ದಿನಾಂಕದಿಂದ ಅಂತಹ ಹಣಗಳ ನೈಜ ಪಾವತಿಯ ದಿನಾಂಕದವರೆಗಿನ ಅವಧಿಗೆ, ಕಾಲದಿಂದ ಕಾಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಗದಿಪಡಿಸುವ ದರಗಳಲ್ಲಿ ಬಡ್ಡಿಯೂ ಸೇರಿದಂತೆ ಸದರಿ ಮೊತ್ತವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಪಾವತಿಮಾಡಬೇಕಾಗುತ್ತದೆ.

6.7 ನಡೆಸಲಾದ ಯಾವುದೇ ವ್ಯವಹಾರವು ಪ್ರೀಪೇಯ್ಡ್ ಕಾರ್ಡ್ ಬಳಸುವ ಕಾರ್ಡ್‌ದಾರರು ಅಂತಹ ವ್ಯವಹಾರಕ್ಕೆ ಸಂಬಂಧಿಸಿದ ಶುಲ್ಕವನ್ನು ನೈಜವಾಗಿ ಅನುಭವಿಸಿರುತ್ತಾರೆ ಎನ್ನುವ ಅಂಶದ ನಿರ್ಣಾಯಕವಾದ ಪುರಾವೆಯಾಗಿರುತ್ತದೆ.

6.8 ಪ್ರೀಪೇಯ್ಡ್ ಕಾರ್ಡ್ ಅನ್ನು ವ್ಯಾಪಾರ ಸ್ಥಳ/ವೆಬ್‌ಸೈಟ್‌ನಲ್ಲಿ ಪ್ರತಿ ಖರೀದಿಗೆ ಒಮ್ಮೆ ಮಾತ್ರ ಬಳಸುವುದನ್ನು ಕಾರ್ಡ್‌ದಾರರು ಖಾತ್ರಿಪಡಿಸಿಕೊಳ್ಳಬೇಕು. ವ್ಯಾಪಾರ ಸಂಸ್ಥೆಯಿಂದ ಸ್ವೀಕರಿಸಲಾಗುವ ಯಾವುದೇ ಶುಲ್ಕ ಅಥವಾ ಇತರ ಪಾವತಿ ಕೋರಿಕೆಯು ಕಾರ್ಡ್‌ದಾರರು ದಾಖಲಾದ ಶುಲ್ಕವನ್ನು ಸೂಕ್ತವಾದ ರೀತಿಯಲ್ಲಿ ಅನುಭವಿಸಿರುತ್ತಾರೆ ಎನ್ನುವುದರ ನಿರ್ಣಾಯಕವಾದ ಪುರಾವೆಯಾಗಿರುತ್ತದೆ. ಪ್ರೀಪೇಯ್ಡ್ ಕಾರ್ಡ್ ಕಳೆದುಹೋಗಿದ್ದಲ್ಲಿ, ಕಳುವಾಗಿದ್ದಲ್ಲಿ ಅಥವಾ ಮೋಸದಿಂದ ಅದನ್ನು ಅಪಬಳಕೆ ಮಾಡಿದ್ದಲ್ಲಿ ಪುರಾವೆಯನ್ನು ಒದಗಿಸುವ ಭಾರ ಕಾರ್ಡ್‌ದಾರರ ಮೇಲಿರುತ್ತದೆ.

6.9 ಯಾವುದೇ ವ್ಯಾಪಾರಿ/ಸಾಧನ ದೋಷದಿಂದ ಅಥವಾ ಸಂವಹನ ಸಂಪರ್ಕದಿಂದ ಉಂಟಾಗುವ ದೋಷದಿಂದ ಘಟಿಸುವ ಯಾವುದೇ ಮರುಪಾವತಿಗಳು ಮತ್ತು ಹೊಂದಾಣಿಕೆಗಳನ್ನು ಆಫ್‌ಲೈನ್ ವಿಧಾನದಲ್ಲಿ ಸಂಸ್ಕರಿಸಲಾಗುವುದು ಮತ್ತು ಅನ್ವಯವಾಗುವ ಪ್ರಸ್ತುತ ಕಾರ್ಡ್ ನೆಟ್‌ವರ್ಕ್ ನಿಯಮಗಳು ಮತ್ತು ನಿಬಂಧನೆಗಳ ಅನುಸಾರ ಯುಕ್ತವಾದ ಪರಿಶೀಲನೆಯ ನಂತರ ಸದರಿ ಮೊತ್ತಗಳನ್ನು ಖಾತೆಗೆ ಜಮಾಮಾಡಲಾಗುವುದು. ಈ ಸಮಯದಲ್ಲಿ ಸ್ವೀಕರಿಸಲಾಗುವ ಯಾವುದೇ ಖರ್ಚುಗಳನ್ನು, ಈ ಮರುಪಾವತಿಯನ್ನು ಪರಿಗಣಿಸದೆ, ಪ್ರೀಪೇಯ್ಡ್ ಕಾರ್ಡ್‌ನಲ್ಲಿ ಲಭ್ಯವಿರುವ ಶಿಲ್ಕಿನ ಆಧಾರದ ಮೇಲೆ ಮಾತ್ರ ಮಾನ್ಯಮಾಡಲಾಗುವುದು ಎನ್ನುವ ಅಂಶವನ್ನು ಕಾರ್ಡ್‌ದಾರರು ಒಪ್ಪುತ್ತಾರೆ.

6.10 ಗುಣಮಟ್ಟ, ಮೌಲ್ಯದ ಖಾತರಿ, ರವಾನೆಯಲ್ಲಿನ ವಿಳಂಬ, ರವಾನೆಯಾಗದಿರುವುದು, ಯಾವುದೇ ಸರಕುಗಳು ಅಥವಾ ಸೇವೆಗಳ ಅಸ್ವೀಕೃತಿಯೂ ಸೇರಿದಂತೆ ಕಾರ್ಡ್‌ದಾರರು ಸ್ವೀಕರಿಸಿದ ಸರಕುಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಸೃಷ್ಟಿಯಾಗುವ ಯಾವುದೇ ವ್ಯಾಜ್ಯಗಳಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ರೀತಿಯಲ್ಲಿಯೂ ಜವಾಬ್ದಾರರಾಗಿರುವುದಿಲ್ಲ. ಪ್ರೀಪೇಯ್ಡ್ ಕಾರ್ಡ್ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಾರ್ಡ್‌ದಾರರಿಗೆ ಒಂದು ಅನುಕೂಲ ಮಾತ್ರವಾಗಿದ್ದು ಸರಕುಗಳು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ, ಅವುಗಳ ಗುಣಮಟ್ಟ, ಪರಿಮಾಣ, ಮೌಲ್ಯ, ರವಾನೆ ಅಥವಾ ರವಾನೆಯಾಗದಿರುವುದಕ್ಕೆ ಸಂಬಂಧಿಸಿದಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ಖಾತರಿಯನ್ನು ನೀಡುವುದಿಲ್ಲ ಅಥವಾ ಆ ಸಂಬಂಧ ಯಾವುದೇ ನಿವೇದನೆಯನ್ನು ಮಾಡುವುದಿಲ್ಲ ಮತ್ತು ಇಂತಹ ಯಾವುದೇ ವ್ಯಾಜ್ಯಗಳನ್ನು ಕಾರ್ಡ್‌ದಾರರು ನೇರವಾಗಿ ವ್ಯಾಪಾರಿಯೊಂದಿಗೆ ಇತ್ಯರ್ಥಗೊಳಿಸಿಕೊಳ್ಳಬೇಕಾಗುತ್ತದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

**7. ಕಳೆದುಹೋದ ಅಥವಾ ಕಳುವಾದ ಪ್ರೀಪೇಯ್ಡ್ ಕಾರ್ಡ್**

7.1 ಪ್ರೀಪೇಯ್ಡ್ ಕಾರ್ಡ್ ಕಳೆದುಹೋದರೆ ಅಥವಾ ಕಳುವಾದರೆ, ಕಾರ್ಡ್‌ದಾರರು ತಕ್ಷಣವೇ ಇಂತಹ ನಷ್ಟ/ಕಳುವನ್ನು ದೂರವಾಣಿಯ ಮೂಲಕ ಗ್ರಾಹಕ ಸೇವೆಗೆ ವರದಿಮಾಡಬೇಕು. ಇಂತಹ ಯಾವುದೇ ಮಾಹಿತಿಯ ಸ್ವೀಕೃತಿಯ ನಂತರ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾಯನಿರ್ವಹಿಸುವ ದಿನದ ಕಾರ್ಯನಿರ್ವಹಿಸುವ ಸಮಯದಲ್ಲಿ, ಕಾರ್ಡ್‌ದಾರರ ಯುಕ್ತವಾದ ಪರಿಶೀಲನೆಯ ನಂತರ ಪ್ರೀಪೇಯ್ಡ್ ಕಾರ್ಡ್ ಅನ್ನು ಹಾಟ್‌ಲಿಸ್ಟ್/ರದ್ದು/ತಡೆಹಿಡಿಯುವಿಕೆ/ಬ್ಲಾಕ್ ಮಾಡುತ್ತದೆ ಮತ್ತು ಆ ಸಂಬಂಧದ ಎಲ್ಲ ಸೌಕರ್ಯಗಳನ್ನೂ ಕೊನೆಗಾಣಿಸುತ್ತದೆ ಹಾಗೂ ಈ ಸಂಬಂಧ ಕಾರ್ಡ್‌ದಾರರಿಗೆ ಆಗಿರುವ ಯಾವುದೇ ಅನನುಕೂಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಬಾಧ್ಯತೆಯನ್ನು ಹೊಂದಿರುವುದಿಲ್ಲ. ಪ್ರೀಪೇಯ್ಡ್ ಕಾರ್ಡ್ ಕಳೆದುಹೋಗಿರುವ/ಕಳುವಾಗಿರುವ ಅಂಶವು ವರದಿಯಾಗುವವರೆಗೆ ಅದರ ಮೇಲೆ ವ್ಯಯವಾಗಿರುವ ಎಲ್ಲ ಶುಲ್ಕಗಳಿಗೆ ಕಾರ್ಡ್‌ದಾರರೇ ಜವಾಬ್ದಾರರಾಗಿರುತ್ತಾರೆ. ಅಲ್ಲದೆ, ಮೇಲೆ ಹೇಳಲಾಗಿರುವ ಹಂತಗಳ ಅನುಸರಣೆಯಾಗದಿರುವುದನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪತ್ತೆಮಾಡಿದ ಸಂದರ್ಭದಲ್ಲಿ ಕಳೆದುಹೋದ ಅಥವಾ ಕಳುವಾದ ಪ್ರೀಪೇಯ್ಡ್ ಕಾರ್ಡಿಗೆ ಸಂಬಂಧಿಸಿದ ಆರ್ಥಿಕ ಹೊಣೆಯು ಸಂಪೂರ್ಣವಾಗಿ ಕಾರ್ಡ್‌ದಾರರದ್ದೇ ಆಗಿರುತ್ತದೆ. ಪ್ರೀಪೇಯ್ಡ್ ಕಾರ್ಡ್ ಮೇಲೆ ಮಾಡಲಾದ ವ್ಯವಹಾರವನ್ನು(ಗಳನ್ನು) ವರದಿಮಾಡುವುದಕ್ಕೆ ಸಂಬಂಧಿಸಿದಂತೆ ಅಥವಾ ಕಳೆದುಹೋದ/ಕಳುವಾದ ಪ್ರೀಪೇಯ್ಡ್ ಕಾರ್ಡಿಗೆ ಸಂಬಂಧಿಸಿಂತೆ ಸೃಷ್ಟಿಯಾಗುವ ಯಾವುದೇ ವ್ಯಾಜ್ಯದ ಸಂದರ್ಭದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿರ್ಣಯವೇ ನಿರ್ಣಾಯಕವಾದುದಾಗಿರುತ್ತದೆ ಮತ್ತು ಕಾರ್ಡ್‌ದಾರರು ಇದಕ್ಕೆ ಬದ್ಧವಾಗಿರಬೇಕಾಗುತ್ತದೆ.

**8. ಪ್ರೀಪೇಯ್ಡ್ ಕಾರ್ಡ್ ಅನ್ನು ಹಿಂದಕ್ಕೆ ಒಪ್ಪಿಸುವುದು**

8.1 ಪ್ರೀಪೇಯ್ಡ್ ಕಾರ್ಡ್‌ನ ವಾಯಿದೆಯ ಅವಧಿಯು ಮುಕ್ತಾಯವಾಗುವ ಮುನ್ನವೂ ಸೇರಿದಂತೆ, ಪ್ರೀಪೇಯ್ಡ್ ಕಾರ್ಡ್ ಅನ್ನು, ಯಾವುದೇ ಸಮಯದಲ್ಲೂ, ಹಿಂದಕ್ಕೆ ಒಪ್ಪಿಸುವಂತೆ ಕೇಳುವ ಹಕ್ಕನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಹೊಂದಿರುತ್ತದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಗುರುತಿಸುತ್ತಾರೆ. ಇಂತಹ ಬೇಡಿಕೆಯನ್ನು ಮುಂದಿಟ್ಟ ತಕ್ಷಣವೇ ಕಾರ್ಡ್‌ದಾರರು ಸದರಿ ಕಾರ್ಡ್ ಅನ್ನು ಈ ಸಂಬಂಧ ಹೆಚ್.ಡಿ.ಎಫ್.ಸಿ ಬ್ಯಾಂಕ್ ನೀಡುವ ಸೂಚನೆಗಳ ಅನುಸಾರವಾಗಿ ಹಿಂದಕ್ಕೆ ಒಪ್ಪಿಸಬೇಕಾಗುತ್ತದೆ.

8.2 ಕಾರ್ಡ್‌ದಾರರ ಮರಣದ ಸಂದರ್ಭದಲ್ಲಿ, ಆ ವಿಷಯದ ಬಗ್ಗೆ ಮಾಹಿತಿಯನ್ನು ಪಡೆದ ನಂತರ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರೀಪೇಯ್ಡ್ ಕಾರ್ಡ್ ಅನ್ನು ರದ್ದುಗೊಳಿಸುತ್ತದೆ.

9. **ವಾಯಿದೆ**

9.1 ಕೆಳಗೆ ಕಂಡಿಕೆ 9.2ಕ್ಕೆ ಬದ್ಧವಾಗಿ ಪ್ರೀಪೇಯ್ಡ್ ಕಾರ್ಡ್‌ಗಳು ಅದರ ನೀಡಿಕೆಯ ದಿನಾಂಕದಿಂದ 5 (ಐದು) ವರ್ಷಗಳ ಅವಧಿಗೆ ವಾಯಿದೆಯನ್ನು ಹೊಂದಿರುತ್ತವೆ.

9.2 ಇಲ್ಲಿ ಹೇಳಿರುವುದಕ್ಕೆ ವ್ಯತಿರಿಕ್ತವಾಗಿರುವ ಅಂಶದ ಹೊರತಾಗಿಯೂ, ಕಾರ್ಡ್‌ದಾರರಿಗೆ ಮತ್ತು/ಅಥವಾ ಅರ್ಜಿದಾರರಿಗೆ ನೋಟೀಸು ನೀಡಿ ಅಥವಾ ನೀಡದೆಯೇ, ಪ್ರೀಪೇಯ್ಡ್ ಕಾರ್ಡ್ ಅನ್ನು ಕೊನೆಗಾಣಿಸುವ/ಕಾರ್ಯಹೀನಗೊಳಿಸುವ ಸಂಪೂರ್ಣವಾದ ವಿವೇಚನೆಯ ಹಕ್ಕನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಹೊಂದಿರುತ್ತದೆ.

9.3 ಕಾರ್ಡ್‌ದಾರರು ಪ್ರೀಪೇಯ್ಡ್ ಕಾರ್ಡ್ ಅನ್ನು ಹಿಂದಕ್ಕೆ ಒಪ್ಪಿಸಲು ಕೋರಿಕೆಯನ್ನು ಸ್ವೀಕರಿಸಿದ ನಂತರ ಅದನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಅಥವಾ ಅದರ ಪ್ರತಿನಿಧಿಗೆ ಹಿಂದಕ್ಕೆ ಒಪ್ಪಿಸಲು ಒಪ್ಪಿರುತ್ತಾರೆ ಮತ್ತು ಪ್ರೀಪೇಯ್ಡ್ ಕಾರ್ಡ್ ಅನ್ನು ಕೊನೆಗಾಣಿಸಿದ/ಕಾರ್ಯಹೀನಗೊಳಿಸಿದ ನಂತರ ಅದನ್ನು ಬಳಸುವಂತಿಲ್ಲ ಅಥವಾ ಬಳಸುವ ಪ್ರಯತ್ನವನ್ನು ಮಾಡುವಂತಿಲ್ಲ.

9.4 ಕಾರ್ಡ್‌ದಾರರು, ಯಾವುದೇ ಸಮಯದಲ್ಲಿಯಾದರೂ, ಗ್ರಾಹಕ ಸೇವೆಯನ್ನು ಸಂಪರ್ಕಿಸಿ ಪ್ರೀಪೇಯ್ಡ್ ಕಾರ್ಡ್ ಅನ್ನು ನಿಷ್ಕ್ರಿಯಗೊಳಿಸಲು, ಈ ಸಂಬಂಧ ಹೆಚ್.ಡಿ.ಎಫ್.ಸಿ ಬ್ಯಾಂಕ್ ರೂಪಿಸಿರುವ ನೀತಿಗಳು ಮತ್ತು ಮಾರ್ಗಸೂಚಿಗಳ ಅನುಸಾರ ಅಗತ್ಯವಿರುವ ದಾಖಲೆಗಳನ್ನು ಒದಗಿಸಿ ಕೋರಿಕೆಯನ್ನು ಸಲ್ಲಿಸಬಹುದಾಗಿದೆ. ಈ ಬಗೆಯ ನಿಷ್ಕ್ರಿಯಗೊಳಿಸುವಿಕೆ/ವಾಯಿದೆ ತೀರುವಿಕೆಯ ನಂತರ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾರ್ಡ್ ಶಿಲ್ಕನ್ನು ವರ್ಗಾಯಿಸಬೇಕಿರುವ ಖಾತೆ/ಪ್ರೀಪೇಯ್ಡ್ ಸಾಧನದ ವಿವರಗಳನ್ನೂ ಸಹ ಕಾರ್ಡ್‌ದಾರರು ಒದಗಿಸಬಹುದಾಗಿದೆ, ಆದರೆ ಇಂತಹ ವರ್ಗಾವಣೆಯು ಅನ್ವಯವಾಗುವ ಕಾನೂನು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನ ಆಂತರಿಕ ನೀತಿಗಳು ಮತ್ತು ಕಾರ್ಯವಿಧಾನಗಳಿಗೆ ಬದ್ಧವಾಗಿರುತ್ತದೆ.

9.5 ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳ ಅನ್ವಯ ಯಾವುದೇ ಹಕ್ಕು ಸಲ್ಲಿಸದಿರುವ ಶಿಲ್ಕಿನ ಮೊತ್ತವನ್ನು ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ ಯೋಜನೆಗೆ ವರ್ಗಾಯಿಸಲಾಗುವುದು ಎನ್ನುವ ಅಂಶವನ್ನು ಕಾರ್ಡ್‌ದಾರರು ಒಪ್ಪಿ ಸ್ಥಿರೀಕರಿಸುತ್ತಾರೆ.

## 10. ತಃಖ್ತೆಗಳು ಮತ್ತು ದಾಖಲೆಗಳು

10.1 ಪ್ರೀಪೇಯ್ಡ್ ಕಾರ್ಡ್/ವ್ಯವಹಾರಗಳಿಗೆ ಸಂಬಂಧಿಸಿದಂತೆ, ವಿದ್ಯುನ್ಮಾನ ವಿಧದಲ್ಲಿ ಅಥವಾ ದಾಖಲೆಗಳ ರೂಪದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿರ್ವಹಿಸುವ ಎಲ್ಲ ದಾಖಲೆಗಳೂ (ಇಷ್ಟಕ್ಕೇ ಮಿತಗೊಳ್ಳದಂತೆ, ಈ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಮಾಡಲಾದ ಅಥವಾ ಸ್ವೀಕರಿಸಲಾದ ಪಾವತಿಗಳೂ ಸೇರಿದಂತೆ) ಕಾರ್ಡ್‌ದಾರರು ಮತ್ತು ಅರ್ಜಿದಾರರಿಗೆ ಪ್ರತಿಯಾಗಿ ನಿರ್ಣಾಯಕವಾದ ಪುರಾವೆ ಎಂದು ಪರಿಗಣಿತವಾಗುತ್ತದೆ.

10.2 ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡಿಗೆ ಸಂಬಂಧಿಸಿದಂತೆ ವ್ಯವಹಾರ ಚೀಟಿಗಳನ್ನು ಮತ್ತು/ಅಥವಾ ಯಾವುದೇ ತಃಖ್ತೆಗಳ ಪ್ರತಿಗಳನ್ನು ಒದಗಿಸಲು ಬದ್ಧವಾಗಿರುವುದಿಲ್ಲ ಮತ್ತು ಕಾರ್ಡ್‌ದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನೊಂದಿಗೆ ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಕಿರು ಸಂದೇಶ ಸೇವೆ (ಎಸ್‌ಎಂಎಸ್) ಮೂಲಕ ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನೊಂದಿಗೆ ಕಾರ್ಡ್‌ದಾರರು ನೋಂದಾಯಿಸಿರುವ ಇ-ಮೇಲ್ ವಿಳಾಸಕ್ಕೆ ವಿದ್ಯುನ್ಮಾನ ಅಂಚೆಗಳ ಮೂಲಕ ಎಚ್ಚರಿಕೆಗಳನ್ನು ಮಾತ್ರ ಪಡೆಯುತ್ತಾರೆ.

10.3 ಪ್ರೀಪೇಯ್ಡ್ ಕಾರ್ಡ್‌ಗಳಿಗೆ ಸಂಬಂಧಿಸಿದಂತೆ ಭೌತಿಕ ತಃಖ್ತೆಗಳನ್ನು ಪಡೆದುಕೊಳ್ಳದಿರಲು ಮತ್ತು ಪ್ರೀಪೇಯ್ಡ್ ಕಾರ್ಡ್‌ಗಳಿಗೆ ಸಂಬಂಧಿಸಿದಂತೆ ತಃಖ್ತೆಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ನೊಂದಿಗೆ ಕಾರ್ಡ್‌ದಾರರು ನೋಂದಾಯಿಸಿರುವ ಇ-ಮೇಲ್ ವಿಳಾಸಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಒದಗಿಸುತ್ತದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಈ ಮೂಲಕ ಒಪ್ಪಿರುತ್ತಾರೆ. ಈ-ಮೇಲ್ ತಃಖ್ತೆಗಳು ಕಾರ್ಡ್‌ದಾರರ ಅನುಕೂಲಕ್ಕೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಅರಿತಿರುತ್ತಾರೆ. ನೋಂದಾಯಿತ ಈ-ಮೇಲ್ ID ಗೆ ತಃಖ್ತೆಗಳನ್ನು ಕಳುಹಿಸುವ ಕಾರಣದಿಂದಾಗಿ ಉಂಟಾಗಬಹುದಾದ

ಗೋಪ್ಯತೆಯ ಉಲ್ಲಂಘನೆಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಬಾಧ್ಯತೆ ಅಥವಾ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಕಾರ್ಡ್‌ದಾರರು ತಾವು ಪಡೆದುಕೊಂಡ ವಿದ್ಯುನ್ಮಾನ ಅಂಚೆಗಳ ಅಧಿಕೃತತೆಯನ್ನು ಪರಿಶೀಲಿಸುತ್ತಾರೆ. ಮೋಸಗಾರರು/ವಂಚಕರಿಂದ ಪಡೆಯಲಾಗುವ ಯಾವುದೇ ತಃಖ್ತೆಗೆ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್ ಅನ್ನು ಜವಾಬ್ದಾರಿಯಾಗಿಸುವಂತಿಲ್ಲ. ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಂದ ತಃಖ್ತೆಗಳನ್ನು ಪಡೆದುಕೊಂಡ ಕಾರಣದಿಂದಾಗಿ ಕಾರ್ಡ್‌ದಾರರ ಕಂಪ್ಯೂಟರ್ ನೆಟ್‌ವರ್ಕ್‌ಗೆ ಯಾವುದಾದರೂ ತೊಂದರೆ ಉಂಟಾದರೆ ಅದಕ್ಕೆ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್ ಅನ್ನು ಜವಾಬ್ದಾರಿಯಾಗಿಸುವಂತಿಲ್ಲ. ಹೆಚ್.ಡಿ.ಎಫ್.ಸಿ ಬ್ಯಾಂಕ್ ಗೆ ಒದಗಿಸಿರುವ ಮಾಹಿತಿಯಲ್ಲಿ ಯಾವುದಾದರೂ ಬದಲಾವಣೆಯಿದ್ದರೆ ಕಾರ್ಡ್‌ದಾರರು ಅದನ್ನು ಲಿಖಿತವಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ತಿಳಿಸಬೇಕಾಗುತ್ತದೆ. ಸರಿಯಲ್ಲದ ಈ-ಮೇಲ್ ವಿಳಾಸ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಕಾರ್ಡ್‌ದಾರರು ತಃಖ್ತೆಗಳನ್ನು ಪಡೆದುಕೊಳ್ಳದಿದ್ದಲ್ಲಿ ಅದಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಜವಾಬ್ದಾರಿಯನ್ನು ಹೊರುವುದಿಲ್ಲ.

11. **ನಷ್ಟ ಪರಿಹಾರ**

11.1 ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾರ್ಡ್‌ದಾರರಿಗೆ ಪ್ರೀಪೇಯ್ಡ್ ಕಾರ್ಡ್ ಅನ್ನು ಒದಗಿಸಿರುವ ಪರಿಗಣನೆಯಲ್ಲಿ, ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಮೂಲಕ ವ್ಯಕ್ತವಾಗಿ ಮತ್ತು ಸ್ಪಷ್ಟವಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು ಅದರ ಅಧಿಕಾರಿಗಳು, ನಿರ್ದೇಶಕರು, ನೌಕರರು, ಷೇರುದಾರರು, ಏಜೆಂಟರು, ಸಮಾಲೋಚಕರು ಮತ್ತು ಇತರ ಪ್ರತಿನಿಧಿಗಳಿಗೆ ನಷ್ಟಪರಿಹಾರವನ್ನು ಒದಗಿಸಲು, ಅವರನ್ನು ಕಾಪಾಡಲು, ರಕ್ಷಿಸಲು, ಮತ್ತು ಅವರನ್ನು ನಿರುಪದ್ರವಿಗಳು ಎಂದು ಪರಿಗಣಿಸಲು ಒಪ್ಪಿರುತ್ತಾರೆ ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು ಅದರ ಅಧಿಕಾರಿಗಳು, ನಿರ್ದೇಶಕರು, ನೌಕರರು, ಷೇರುದಾರರು, ಏಜೆಂಟರು, ಸಮಾಲೋಚಕರು ಮತ್ತು ಇತರ ಪ್ರತಿನಿಧಿಗಳಿಗೆ, ಯಾವುದೇ ಸಮಯದಲ್ಲಿ, ಪ್ರೀಪೇಯ್ಡ್ ಕಾರ್ಡ್‌ಗಳ ಉಪಬಂಧಗಳ ಪರಿಣಾಮದಿಂದಾಗಿ ಅಥವಾ ಅವುಗಳ ಕಾರಣದಿಂದಾಗಿ, ಇವುಗಳಿಗೆ ಮಿತಗೊಳ್ಳದಂತೆ, ಕೆಳಗಿನ ಪ್ರಕರಣಗಳಲ್ಲಿ ತಗುಲುವ, ಉಂಟಾಗುವ ಅಥವಾ ಅನುಭವಿಸುವ ಇಲ್ಲವೇ ತಗುಲುವಂತೆ, ಉಂಟಾಗುವಂತೆ ಅಥವಾ ಅನುಭವಿಸುವಂತೆ ಮಾಡುವ ಯಾವುದೇ ಸ್ವರೂಪದ ಎಲ್ಲ ಕಾರ್ಯಗಳು, ಹಕ್ಕುಸಲ್ಲಿಕೆಗಳು, ಬೇಡಿಕೆಗಳು, ಕಾನೂನು ಪ್ರಕ್ರಿಯೆಗಳು, ನಷ್ಟಗಳು, ಹಾನಿಗಳು, ವೈಯಕ್ತಿಕ ಗಾಯಗಳು, ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳಿಂದ ಮತ್ತು ಅವುಗಳಿಗೆ ಪ್ರತಿಯಾಗಿ ನಷ್ಟಪರಿಹಾರವನ್ನು ಒದಗಿಸಲು ಒಪ್ಪಿರುತ್ತಾರೆ: (a) ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರ ನಿರ್ಲಕ್ಷ್ಯ, ತಪ್ಪು ಅಥವಾ ಅಪನಡತೆ; (b) ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಂದ ಈ ಷರತ್ತುಗಳು ಮತ್ತು ನಿಬಂಧನೆಗಳ ಅಥವಾ ಅನ್ವಯವಾಗುವ ಯಾವುದೇ ಕಾನೂನಿನ ಉಲ್ಲಂಘನೆ ಅಥವಾ ಅನನುಸರಣೆ; (c) ಪ್ರೀಪೇಯ್ಡ್ ಕಾರ್ಡ್ ನೀಡಿಕೆ/ಬಳಕೆಗೆ ಮತ್ತು/ಅಥವಾ ಇತರ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ವಿರುದ್ಧ ಮೂರನೆಯ ಪಕ್ಷದಿಂದ ಮಾಡಲಾಗಿರುವ ಯಾವುದೇ ಹಕ್ಕುಸಲ್ಲಿಕೆ ಅಥವಾ ಪ್ರಾರಂಭಿಸಲಾಗಿರುವ ಯಾವುದೇ ಪ್ರಕ್ರಿಯೆ; (d) ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರ ಸೂಚನೆಗಳ ಮೇಲೆ ಹೆಚ್.ಡಿ.ಎಫ್.ಸಿ ಬ್ಯಾಂಕ್, ಅದರ ಅಧಿಕಾರಿಗಳು ಅಥವಾ ಏಜೆಂಟರು ಕ್ರಮವನ್ನು ತೆಗೆದುಕೊಂಡಿರುವುದು ಅಥವಾ ಕ್ರಮವನ್ನು ತೆಗೆದುಕೊಳ್ಳದೇ ಇರುವುದು; ಮತ್ತು/ಅಥವಾ (e) ಕಾರ್ಡ್‌ದಾರರ ಕಡೆಯಿಂದ ಯಾವುದೇ ವ್ಯವಹಾರದಲ್ಲಿ ಮೋಸ ಅಥವಾ ಅಪ್ರಾಮಾಣಿಕತೆ.

12. **ಹೊಣೆಯಿಂದ ಹೊರಗಿರಿಸುವಿಕೆ**

12.1 ಈ ಷರತ್ತುಗಳು ಅಥವಾ ನಿಬಂಧನೆಗಳ ಯಾವುದೇ ಉಪಬಂಧಗಳಿಗೆ ಸಂಬಂಧಿಸಿದಂತೆ ಪೂರ್ವಾಗ್ರಹವಿಲ್ಲದೆ, ಈ ಷರತ್ತುಗಳು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ, ಮುಂದಿನವುಗಳಿಗೆ ಮಿತಗೊಳ್ಳದಂತೆ, ಕೆಳಗಿನವುಗಳಿಂದ ಉಂಟಾಗುವ ನಷ್ಟ ಅಥವಾ ಹಾನಿಯೂ ಸೇರಿದಂತೆ, ನೇರವಾಗಿ ಅಥವಾ ಪರೋಕ್ಷವಾಗಿ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಗೆ ಯಾವುದೇ ರೀತಿಯಲ್ಲಿ ಉಂಟಾದ ಅಥವಾ ಸೃಷ್ಟಿಯಾದ ಯಾವುದೇ ನಷ್ಟ ಅಥವಾ ಹಾನಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ: (a) ಪ್ರೀಪೇಯ್ಡ್ ಕಾರ್ಡ್ ಅನ್ನು ಒಪ್ಪಲು ಅಥವಾ ಸ್ವೀಕರಿಸಲು ಯಾವುದೇ ವ್ಯಕ್ತಿಯಿಂದ ನಿರಾಕರಣೆ; (b) ಪ್ರೀಪೇಯ್ಡ್ ಕಾರ್ಡ್ ಹಿಂದಕ್ಕೆ ಒಪ್ಪಿಸುವ ಸಮಯದಲ್ಲಿ ಕಾರ್ಡ್‌ದಾರರು ಅಥವಾ ಅರ್ಜಿದಾರರು ಪ್ರೀಪೇಯ್ಡ್ ಕಾರ್ಡ್ ಅನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರತಿನಿಧಿಯಲ್ಲದೆ ಇತರ ಯಾವುದೇ ವ್ಯಕ್ತಿಗೆ ಒಪ್ಪಿಸುವುದು; ಮತ್ತು/ಅಥವಾ (c) ಪ್ರೀಪೇಯ್ಡ್ ಕಾರ್ಡ್ ಲಭ್ಯಾವಕಾಶ ಮತ್ತು/ಅಥವಾ ಬಳಕೆಗೆ ಯಾವುದೇ ಅಡಚಣೆ ಅಥವಾ ನಿಲುಗಡೆ.

13. **ಶುಲ್ಕಗಳು**

13.1 ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರೀಪೇಯ್ಡ್ ಕಾರ್ಡ್ ಬಳಕೆಗೆ ಶುಲ್ಕಗಳನ್ನು ವಿಧಿಸುವ ಹಕ್ಕುಗಳನ್ನು ಹೊಂದಿರುತ್ತದೆ ಮತ್ತು ಈ ಶುಲ್ಕಗಳನ್ನು ಕಾರ್ಡ್‌ದಾರರು ಮತ್ತು ಅರ್ಜಿದಾರರ ತಿಳುವಳಿಕೆಗೆ ಬ್ಯಾಂಕಿನ ವೆಬ್‌ಸೈಟಿನಲ್ಲಿ ಕಾಲದಿಂದ ಕಾಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರಕಟಿಸುತ್ತದೆ. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಮೂಲಕ ಇಂತಹ ಶುಲ್ಕಗಳ ಪಾವತಿಗೆ ಒಪ್ಪಿರುತ್ತಾರೆ.

13.2 ಪ್ರೀಪೇಯ್ಡ್ ಕಾರ್ಡ್ ಬಳಕೆಯ ಕಾರಣದಿಂದಾಗಿ ಪಾವತಿಯಾಗಬೇಕಿರುವ ಯಾವುದೇ ಸರ್ಕಾರಿ ಶುಲ್ಕಗಳು, ಸುಂಕಗಳು, ಖರ್ಚುಗಳು ಅಥವಾ ತೆರಿಗೆಯನ್ನು ಕಾರ್ಡ್‌ದಾರರು/ಅರ್ಜಿದಾರರು ಸಂಪೂರ್ಣವಾಗಿ ಭರಿಸಬೇಕಾಗುತ್ತದೆ ಮತ್ತು ಇಂತಹ ಶುಲ್ಕಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಮೇಲೆ ವಿಧಿಸಿದ ಸಂದರ್ಭದಲ್ಲಿ (ನೇರವಾಗಿ ಅಥವಾ ಪರೋಕ್ಷವಾಗಿ) ಕಾರ್ಡ್‌ದಾರರು/ಅರ್ಜಿದಾರರು ಸದರಿ ಶುಲ್ಕಗಳನ್ನು ಪಾವತಿಸಲು ಒಪ್ಪುತ್ತಾರೆ.

13.3 ಪ್ರೀಪೇಯ್ಡ್ ಕಾರ್ಡ್ ಮತ್ತು ಅದರ ಬಳಕೆಗೆ ಸಂಬಂಧಿಸಿದಂತೆ ಶುಲ್ಕಗಳು, ಸುಂಕಗಳು, ಖರ್ಚುಗಳು ಅಥವಾ ತೆರಿಗೆಗಳ ಪಾವತಿಗೆ ಸಂಬಂಧಿಸಿದಂತೆ ಕಾರ್ಡ್‌ದಾರರು/ಅರ್ಜಿದಾರರ ಹೊಣೆಯನ್ನು ಕುರಿತಾಗಿ ಯಾವುದೇ ಪೂರ್ವಾಗ್ರಹವಿಲ್ಲದೆ, ಇವುಗಳಿಗೆ ಮಿತಗೊಳ್ಳದಂತೆ,

ಮೇಲಿನ ಕಲಮು 13.1 ಮತ್ತು ಕಲಮು 13.2ರ ಅನುಸಾರ ಕಾರ್ಡ್‌ದಾರರು/ಅರ್ಜಿದಾರರಿಂದ ಬಾಕಿ ಇರುವ ಎಲ್ಲ ಮೊತ್ತಗಳನ್ನೂ ವಸೂಲಿ ಮಾಡುವ ಹಕ್ಕುಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಹೊಂದಿರುತ್ತದೆ ಮತ್ತು ಲಭ್ಯವಿರುವ ಕಾರ್ಡ್ ಶಿಲ್ಕಿಗೆ ಖರ್ಚು ಹಾಕುವ ಮೂಲಕ ಮತ್ತು/ಅಥವಾ ಖಾತೆಯಿಂದ ಬಾಕಿ ಇರುವ ಮೊತ್ತಗಳಿಗೆ ಖರ್ಚುಹಾಕುವ ಮೂಲಕ ಮತ್ತು/ಅಥವಾ ಕಾರ್ಡ್‌ದಾರರು/ಅರ್ಜಿದಾರರ ಇತರ ಯಾವುದೇ ಖಾತೆಯನ್ನು ಖರ್ಚುಹಾಕುವ ಮೂಲಕ ಸದರಿ ಬಾಕಿಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ವಸೂಲಿ ಮಾಡುತ್ತದೆ.

## 14. ವ್ಯಾಜ್ಯಗಳು

14.1 ಹೆಚ್.ಡಿ.ಎಫ್.ಸಿ ಬ್ಯಾಂಕ್, ಮುಂದಿನವುಗಳಿಗೆ ಮಿತಗೊಳ್ಳದಂತೆ, ಗುಣಮಟ್ಟ, ಮೌಲ್ಯ, ಖಾತರಿ, ರವಾನೆಯಲ್ಲಿನ ವಿಳಂಬ, ರವಾನೆಯಾಗದಿರುವಿಕೆ, ಯಾವುದೇ ಸರಕುಗಳು ಅಥವಾ ಸೇವೆಗಳ ಅಸ್ವೀಕೃತಿ ಸೇರಿದಂತೆ ಪ್ರೀಪೇಯ್ಡ್ ಕಾರ್ಡ್ ಬಳಸಿ ಖರೀದಿಸಲಾಗುವ ಸರಕುಗಳು ಮತ್ತು ಸೇವೆಗಳಿಗೆ ಸಂಬಂಧಿಸಿದ ಯಾವುದೇ ವ್ಯಾಜ್ಯಗಳಿಗೆ ಯಾವುದೇ ರೀತಿಯಲ್ಲಿಯೂ ಜವಾಬ್ದಾರರಾಗಿರುವುದಿಲ್ಲ. ಪ್ರೀಪೇಯ್ಡ್ ಕಾರ್ಡ್ ವ್ಯಾಪಾರಿಗಳಿಗೆ ಪಾವತಿ ಮಾಡಲು ಕಾರ್ಡ್‌ದಾರರು ಹೊಂದಿರುವ ಒಂದು ವಿಧಾನ ಮಾತ್ರವಾಗಿದ್ದು ಕಾರ್ಡ್‌ದಾರರು ಖರೀದಿ ಮಾಡಿರುವ ಸರಕುಗಳು ಅಥವಾ ಸೇವೆಗಳಿಗೆ ಸಂಬಂಧಿಸಿದ ಯಾವುದೇ ವ್ಯಾಜ್ಯಗಳನ್ನು, ಅವು ಯಾವುದೇ ಕಾರಣಕ್ಕಾಗಿ ಉದ್ಭವವಾದರೂ, ವ್ಯಾಪಾರಿಯೊಂದಿಗೆ ಕಾರ್ಡ್‌ದಾರರು ನೇರವಾಗಿ ಇತ್ಯರ್ಥಮಾಡಿಕೊಳ್ಳುವುದು ಹಾಗೂ ಈ ಸಂಬಂಧವಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ಹೊಣೆಯನ್ನು ಹೊಂದಿರುವುದಿಲ್ಲ.

14.2 ಹೆಚ್.ಡಿ.ಎಫ್.ಸಿ ಬ್ಯಾಂಕ್ ಕೆಳಗಿನವುಗಳ ಕಾರಣದಿಂದಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಉದ್ಭವಿಸುವ ಯಾವುದೇ ನಷ್ಟ ಅಥವಾ ಹಾನಿಗೆ ಕಾರ್ಡ್‌ದಾರರಿಗೆ ಮತ್ತು ಅರ್ಜಿದಾರರಿಗೆ ಪ್ರತಿಯಾಗಿ ಬಾಧ್ಯತೆಯನ್ನು ಹೊಂದಿರುವುದಿಲ್ಲ: (a) ಕಾರ್ಡ್‌ದಾರರ/ಅರ್ಜಿದಾರರ ಮೊಬೈಲ್ ಫೋನ್ ನಂಬರಿನ ಯಾವುದೇ ಅನಧಿಕೃತವಾದ ಬಳಕೆ; (b) ಎಲ್ಲ ಅಥವಾ ಯಾವುದೇ ಎಚ್ಚರಿಕೆಗೆ ಪ್ರತಿಯಾಗಿ ಕಾರ್ಯನಿರ್ವಹಿಸುವಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಯಾವುದೇ ದೋಷ, ತಪ್ಪುವಿಕೆ, ವಿಳಂಬ ಅಥವಾ ಅಸಾಮರ್ಥ್ಯ; (c) ಪ್ರಸರಣದಲ್ಲಿ ಯಾವುದೇ ಮಾಹಿತಿ/ಸೂಚನೆ/ಎಚ್ಚರಿಕೆಗಳ ಸೋರಿಹೋಗುವಿಕೆ; (d) ಬ್ಯಾಂಕಿನಿಂದ ನೀಡಲಾದ ಮಾಹಿತಿ/ಸೂಚನೆಗಳಿಗೆ ಯಾವುದೇ ವ್ಯಕ್ತಿಯು ಅನಧಿಕೃತವಾಗಿ ಲಭ್ಯಾವಕಾಶವನ್ನು ಪಡೆದುಕೊಳ್ಳುವುದು ಅಥವಾ ಗೋಪ್ಯತೆಯ ಉಲ್ಲಂಘನೆ.

14.3 ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದಾದರೂ ಕ್ರಮರಾಹಿತ್ಯಗಳು ಅಥವಾ ಅಸಾಂಗತ್ಯಗಳು ಇದ್ದಲ್ಲಿಅಥವಾ ವ್ಯವಹಾರವೊಂದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಅಥವಾ ದೂರು ಇದ್ದಲ್ಲಿ ಅಂತಹ ವ್ಯವಹಾರವು ಘಟಿಸಿದ 45 (ನಲವತ್ತೈದು) ದಿನಗಳ ಒಳಗೆ ಕಾರ್ಡ್‌ದಾರರು ಗ್ರಾಹಕ ಕಾಳಜಿ ವೇದಿಕೆಯನ್ನು ಸಂಪರ್ಕಿಸುವ ಮೂಲಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ವ್ಯವಹಾರವೊಂದು ಘಟಿಸಿ 45 (ನಲವತ್ತೈದು) ದಿನಗಳ ಒಳಗೆ ಅದಕ್ಕೆ ಸಂಬಂಧಿಸಿದಂತೆ ವ್ಯತಿರಿಕ್ತವಾದ ಮಾಹಿತಿಯನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪಡೆದೊಕೊಳ್ಳದಿದ್ದಲ್ಲಿ, ಸಂಬಂಧಿತ ವ್ಯವಹಾರವು(ಗಳು) ಯಾವುದೇ ಕ್ರಮರಾಹಿತ್ಯ/ಅಸಾಂಗತ್ಯವಿಲ್ಲದೆ ನಡೆದಿರುತ್ತದೆ ಎನ್ನುವ ಆಧಾರದ ಮೇಲೆ ಅವನ್ನು ಪರಿಗಣಿಸಿ ಮುಂದುವರೆಯಲಾಗುತ್ತದೆ.

14.4 ಈ ಷರತ್ತುಗಳು ಮತ್ತು ನಿಬಂಧನೆಗಳ ನೆಲೆಯಲ್ಲಿ ಸಂಬಂಧಿಸಿದಂತೆ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಮುಂದಿಡುವ ದೂರುಗಳು/ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಈ ಸಂಬಂಧವಾಗಿ ಅಗತ್ಯವಾಗಿರುವಂತಹ ಎಲ್ಲ ಮಾಹಿತಿ ಮತ್ತು ದಾಖಲೆಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ಯುಕ್ತವಾಗಿ ಒದಗಿಸುವುದು ಅಗತ್ಯವಾಗಿರುತ್ತದೆ.

14.5 ಹೆಚ್.ಡಿ.ಎಫ್.ಸಿ ಬ್ಯಾಂಕ್ ತನ್ನ ಗ್ರಾಹಕರನ್ನು ಯಾವುದೇ ಗೋಪ್ಯವಾದ ಮಾಹಿತಿ ನೀಡುವಂತೆ ಕೇಳುವುದಿಲ್ಲ ಎನ್ನುವ ಅಂಶವನ್ನು ಗಮನದಲ್ಲಿರಿಸಿಕೊಳ್ಳಬೇಕು ಮತ್ತು ಹಾಗಾಗಿ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು, ಇವುಗಳಿಗೆ ಮಿತಗೊಳ್ಳದಂತೆ, ಪಾಸ್‌ವರ್ಡ್‌ಗಳು, ಬಳಕೆದಾರ IDಗಳು, ಮುಂತಾದವೂ ಸೇರಿದಂತೆ ಗೋಪ್ಯ ಸ್ವರೂಪದ ಯಾವುದೇ ಮಾಹಿತಿಯನ್ನು ಅವುಗಳನ್ನು ಕೇಳುವ ಯಾವುದೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳಬಾರದು. ನಮ್ಮ ದೂರುಗಳ ಪ್ರಕ್ರಿಯೆಗೆ ಸಂಬಂಧಿಸಿದ ಪೂರ್ಣ ವಿವರಗಳಿಗಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್ ಅನ್ನು ಗಮನಿಸುವುದು.

15. **ಮಾಹಿತಿಯ ಪ್ರಕಟಣೆಗೆ ಪ್ರಕಟ ಒಪ್ಪಿಗೆ/ಕೈಬಿಡುವಿಕೆ**

15.1 ಕಾರ್ಡ್‌ದಾರರ ಮತ್ತು/ಅಥವಾ ಅರ್ಜಿದಾರರ ಕಛೇರಿ/ನಿವಾಸದಿಂದ ಯಾವುದೇ ಮಾಹಿತಿ ಅಥವಾ ಮತ್ತಾವುದಾದರೂ ಅಂಶವನ್ನು ಪರಿಶೀಲಿಸಲು ಅಥವಾ ಕಾರ್ಡ್‌ದಾರರನ್ನು (ಮತ್ತು/ಅಥವಾ ಅರ್ಜಿದಾರರನ್ನು)/ಕಾರ್ಡ್‌ದಾರರ ನೌಕರದಾತರನ್ನು (ಮತ್ತು/ಅಥವಾ ಅರ್ಜಿದಾರರ ನೌಕರದಾತರನ್ನು)/ ಬ್ಯಾಂಕರ್/ಕ್ರೆಡಿಟ್ ಬ್ಯೂರೋಗಳು/ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಇತರ ಯಾವುದೇ ಮೂಲವನ್ನು, ಸದಸ್ಯತ್ವ ಅಗತ್ಯಗಳನ್ನು ಸ್ಥಿರೀಕರಿಸಲು ಅಗತ್ಯವಾದ ಯಾವುದೇ ಮಾಹಿತಿಯನ್ನು ಪಡೆದುಕೊಳ್ಳಲು ಅಥವಾ ಕಾರ್ಡ್‌ದಾರರ/ಅರ್ಜಿದಾರರ ಖಾತೆಯನ್ನು ಉತ್ತಮವಾದ ಕ್ರೆಡಿಟ್ ನೆಲೆಯಲ್ಲಿ ನಿರ್ವಹಿಸಲು ಅಗತ್ಯವಾದ ಮಾಹಿತಿಯನ್ನು ಪಡೆದುಕೊಳ್ಳುವ ಅಥವಾ ನೀಡುವ ಉದ್ದೇಶದಿಂದ ಸಂಪರ್ಕಿಸಲು ಕಾರ್ಡ್‌ದಾರರು ಮತ್ತು ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು/ಅಥವಾ ಅದರ ಸಹಯೋಗಿಗಳಿಗೆ ಈ ಮೂಲಕ ಅಧಿಕಾರವನ್ನು ನೀಡಿರುತ್ತಾರೆ.

15.2 ಇಲ್ಲಿ ಹೇಳಲಾಗಿರುವುದಕ್ಕೆ ವ್ಯತಿರಿಕ್ತವಾಗಿ ಇದ್ದರೂ, ಕಾರ್ಡ್‌ದಾರರು ಮತ್ತು ಅರ್ಜಿದಾರರು, ಇಷ್ಟಕ್ಕೇ ಮಿತಗೊಳ್ಳದಂತೆ, ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಸಲ್ಲಿಸಿರುವ/ಜಾರಿಗೊಳಿಸಿರುವ ದಸ್ತಾವೇಜುಗಳಲ್ಲಿ ಒಳಗೊಂಡಿರುವ ಯಾವುದೇ ಮಾಹಿತಿಯನ್ನು ಮತ್ತು/ಅಥವಾ ಕಾರ್ಡ್‌ದಾರರಿಗೆ ಮತ್ತು/ಅಥವಾ ಅರ್ಜಿದಾರರಿಗೆ ಸಂಬಂಧಪಟ್ಟಿರುವ ಇತರ ಯಾವುದೇ ಮಾಹಿತಿಯನ್ನು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ಈಗ ಸಂಗ್ರಹಿಸಿರುವ ಮತ್ತು ಇಲ್ಲಿಂದ ಮುಂದೆ ಸಂಗ್ರಹಿಸುವ ಪ್ರೀಪೇಯ್ಡ್ ಕಾರ್ಡ್ ಬಳಕೆ, ಕಾರ್ಡ್‌ದಾರರಿಗೆ ಮತ್ತು/ಅಥವಾ ಅರ್ಜಿದಾರರಿಗೆ

ಸಂಬಂಧಪಟ್ಟಿರುವ ಯಾವುದೇ ವೈಯಕ್ತಿಕ ಮಾಹಿತಿ ಮತ್ತು ಸೂಕ್ಷ್ಮವಾದ ಮಾಹಿತಿ, ಕೆವೈಸಿ ಸಂಬಂಧಿತ ಮಾಹಿತಿ, ದಾಖಲೆಗಳು ಮತ್ತು ದತ್ತಾಂಶ, ಸಾಲ ಮಾಹಿತಿ, ಮತ್ತು ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಗೆ ಸಂಬಂಧಿಸಿದ ಇತರ ಯಾವುದೇ ಮಾಹಿತಿ (ಒಟ್ಟಾಗಿ **"ಮಾಹಿತಿ"**) ಸೇರಿದಂತೆ, ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಗೆ ಸಂಬಂಧಿಸಿದ ಯಾವುದೇ ಮಾಹಿತಿಗೆ ಸಂಬಂಧಪಟ್ಟಂತೆ, ಈ ಮೂಲಕ ಕೆಳಗಿನವುಗಳಲ್ಲಿ ಯಾವುದನ್ನೇ ಆಗಲಿ ಕೈಗೊಳ್ಳಲು ಮತ್ತು ನಡೆಸಲು ಪ್ರಕಟವಾಗಿ ಒಪ್ಪಿಗೆಯನ್ನು ಸೂಚಿಸಿ ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ (ಬ್ಯಾಂಕ್ ತಾನೇ ನಡೆಸಲು ಅಥವಾ ತನ್ನ ಯಾವುದಾದರೂ ಸೇವಾದಾರರ ಮೂಲಕ ನಡೆಸಲು ಅಥವಾ ಸ್ವಚಾಲಿತ ವಿಧದಲ್ಲಿ ಅಥವಾ ಇನ್ನಾವುದೇ ರೀತಿಯಲ್ಲಿ ನಡೆಸಲು) ಅಧಿಕಾರವನ್ನು ನೀಡಿರುತ್ತಾರೆ:

(a) ಇಷ್ಟಕ್ಕೇ ಮಿತಗೊಳ್ಳದಂತೆ, ಸಾಲ ಮಾಹಿತಿ ಕಂಪನಿಗಳು, ವೆಬ್‌ಸೈಟ್‌ಗಳು, ದತ್ತಾಂಶ ನೆಲೆಗಳು, ಮತ್ತು ಆನ್‌ಲೈನ್ ವೇದಿಕೆಗಳೂ (ಸಾರ್ವಜನಿಕ ಅಥವಾ ಸಾರ್ವಜನಿಕವಲ್ಲದ್ದು) ಸೇರಿದಂತೆ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಂದ ಹಾಗೂ ಇತರ ಭೌತಿಕ ಅಥವಾ ಆನ್‌ಲೈನ್ ಮೂಲಗಳ ಮೂಲಕ, ಇಷ್ಟಕ್ಕೇ ಮಿತಗೊಳ್ಳದಂತೆ, ಆನ್‌ಲೈನ್ ದತ್ತಾಂಶ ನೆಲೆಗಳೂ ಸೇರಿದಂತೆ ಯಾವುದೇ ಮೂಲಗಳು ಮತ್ತು ವ್ಯಕ್ತಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವುದು; ಹಾಗೂ ಆನ್‌ಲೈನ್ ವೇದಿಕೆಗಳಲ್ಲಿ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರ ಲಾಗ್ ಇನ್ ಮತ್ತು ಪಾಸ್‌ವರ್ಡ್ ಪ್ರವೇಶ ಋಜುವಾತುಗಳನ್ನು ಬಳಸುವುದೂ ಸೇರಿದಂತೆ ಮಾಹಿತಿಗೆ ಈ ಬಗೆಯ ಲಭ್ಯಾವಕಾಶ ಪಡೆದುಕೊಳ್ಳುವಿಕೆ, ಸಂಗ್ರಹ ಅಥವಾ ಪರಿಶೀಲನೆಗಾಗಿ ಕಾರ್ಡ್‌ದಾರರ ಮತ್ತು ಅಥವಾ ಅರ್ಜಿದಾರರ ಪರವಾಗಿ ಮತ್ತು ಅವರಿಗಾಗಿ ಕಾರ್ಯನಿರ್ವಹಿಸುವುದು; ಈ ಬಗೆಯ ಸಂಗ್ರಹ, ಲಭ್ಯಾವಕಾಶ ಮತ್ತು ಪರಿಶೀಲನೆಯನ್ನು ಕಾರ್ಡ್‌ದಾರರಿಗೆ ಮತ್ತು/ಅಥವಾ ಅರ್ಜಿದಾರರಿಗೆ ಯಾವುದೇ ಸೂಚನೆಯನ್ನು ನೀಡದೆಯೇ ನಡೆಸಬಹುದಾಗಿದೆ;

(b) ಶೇಖರಣೆ, ರಚನಾಬದ್ಧಗೊಳಿಸುವಿಕೆ, ವ್ಯವಸ್ಥೆಗೊಳಿಸುವಿಕೆ, ಸಂಘಟಿಸುವಿಕೆ, ಪುನರ್‌ಸೃಷ್ಟಿ, ನಕಲು, ಬಳಕೆ, ಚಿತ್ರಿಸುವಿಕೆ ಮೊದಲಾಗಿ, ಹೆಚ್.ಡಿ.ಎಫ್.ಸಿ ಬ್ಯಾಂಕ್ ಸೂಕ್ತವೆಂದು ಪರಿಗಣಿಸುವ ವಿಧದಲ್ಲಿ ಮಾಹಿತಿಯನ್ನು ಸಂಸ್ಕರಿಸುವುದು;

(c) ಕಾನೂನಿನ ಪ್ರಕಾರ ಒಪ್ಪಂದಕ್ಕೆ ಅಗತ್ಯವಾದ ಅವಧಿಗೆ ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕಿನ ಪುರಾವೆಯ ಮತ್ತು ಕ್ಲೈಮ್ ಸಲ್ಲಿಕೆಯ ಉದ್ದೇಶಗಳಿಗೆ ಅಗತ್ಯವಾದ ಅವಧಿಗೆ, ಯಾವುದು ದೀರ್ಘವೋ ಆ ಅವಧಿಗೆ ಮಾಹಿತಿಯನ್ನು ಶೇಖರಿಸುವುದು.

(d) ಹೆಚ್.ಡಿ.ಎಫ್.ಸಿ ಬ್ಯಾಂಕ್ ಸೂಕ್ತವೆಂದು ಪರಿಗಣಿಸುವಂತಹ ಉದ್ದೇಶಗಳಿಗೆ, ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರಿಗೆ ಸೂಚನೆ ನೀಡದೆ ಕಾಲದಿಂದ ಕಾಲಕ್ಕೆ, ಇಷ್ಟಕ್ಕೇ ಮಿತಗೊಳ್ಳದಂತೆ, ಯಾವುದೇ ಕಾರ್ಡ್ ನೀಡಿಕೆದಾರ, ಸಾಲ ಬ್ಯೂರೋ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಹೆಚ್.ಡಿ.ಎಫ್.ಸಿ ಬ್ಯಾಂಕ್‌ನ ಯಾವುದೇ ಶಾಖೆ, ಮಾತೃಸಂಸ್ಥೆ/ಅಂಗಸಂಸ್ಥೆ, ಸಂಯೋಜಿತ ಸಂಸ್ಥೆ, ಗುಂಪು ಕಂಪನಿಗಳು ಮತ್ತು ಸಹಯೋಗಿಗಳು, ಸರ್ಕಾರಿ/ನಿಬಂಧನಾ ಪ್ರಾಧಿಕಾರಗಳು, ಸೇವಾ ಪೂರೈಕೆದಾರರು, ವ್ಯಾಪಾರ ವ್ಯವಹಾರ ನಡೆಸುವವರು, ಏಜೆಂಟ್ ಅಥವಾ ಮೂರನೆಯ ಪಕ್ಷದ ಉಪ-ಗುತ್ತಿಗೆದಾರರು, ಸಮಾಲೋಚಕರು, ಸಾಲ ಮಾಹಿತಿ ಕಂಪನಿಗಳು, ನಿಬಂಧಕರು, ತನಿಖಾ ಏಜೆನ್ಸಿಗಳು, ನ್ಯಾಯಾಂಗ, ಅರೆ-ನ್ಯಾಯಾಂಗ ಮತ್ತು ಶಾಸನಬದ್ಧ ಪ್ರಾಧಿಕಾರಗಳೂ ಸೇರಿದಂತೆ ಯಾವುದೇ ವ್ಯಕ್ತಿಯೊಂದಿಗೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು, ಹಂಚಿಕೊಳ್ಳುವುದು ಅಥವಾ ಆ ವ್ಯಕ್ತಿಗಳಿಗೆ ಮಾಹಿತಿಯನ್ನು ಪ್ರಕಟಿಸುವುದು. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಮೂಲಕ ಖಾಸಗಿತನದ ಸವಲತ್ತನ್ನು ಮನ್ನಾಮಾಡಿರುತ್ತಾರೆ.

15.3 ಕುಂದುಕೊರತೆ ಸಂಬಂಧಿತ ಸಂಭಾಷಣೆಗಳು ಅಥವಾ ಪಾವತಿ ವಸೂಲಿ ಸಂಬಂಧಿತ ಸಂಭಾಷಣೆಗಳು ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್, ತನ್ನ ವಿವೇಚನೆಯಲ್ಲಿ,ಸೂಕ್ತವೆಂದು ಪರಿಗಣಿಸುವ ಇತರ ಯಾವುದೇ ಸಂಭ್ಲಾಷಣೆಗಳ ಪ್ರಕರಣಗಳಲ್ಲಿ ಕಾರ್ಡ್‌ದಾರರು/ಅರ್ಜಿದಾರರು ಅಥವಾ ಕಾರ್ಡ್‌ದಾರರು/ಅರ್ಜಿದಾರರ ಪ್ರತಿನಿಧಿಗಳು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರತಿನಿಧಿಗಳ ನಡುವಿನ ನಿರ್ದಿಷ್ಟ ಸಂಭಾಷಣೆಗಳನ್ನು ಧ್ವನಿ ಮುದ್ರಿಸಿಕೊಳ್ಳಲು ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಮೂಲಕ ಹೆಚ್.ಡಿ.ಎಫ್.ಸಿ ಬ್ಯಾಂಕ್ ಗೆ ಅಧಿಕಾರವನ್ನು ನೀಡಿರುತ್ತಾರೆ.

15.4 ಕಾರ್ಡ್‌ದಾರರು ಮತ್ತು ಅರ್ಜಿದಾರರು ದೂರವಾಣಿ/ ಮೊಬೈಲ್/ಕಿರು ಸಂದೇಶ ಸೇವೆ (ಎಸ್‌ಎಂಎಸ್)/ ಇ-ಮೇಲ್ ಅಥವಾ ಇತರ ಯಾವುದೇ ವಿಧಾನದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು/ಅಥವಾ ಅದರ ಏಜೆಂಟರಿಂದ ಮಾಹಿತಿಯ ಪಡೆಯುವಿಕೆ/ ಮಾರಾಟ/ಅಸ್ತಿತ್ವದಲ್ಲಿರುವ ಗ್ರಾಹಕರಿಗೆ ಇತರ ಉತ್ಪನ್ನಗಳ ಮಾರಾಟದ ಉದ್ದೇಶಗಳಿಗೆ ಮಾಹಿತಿ/ಸೇವೆಯನ್ನು ಪಡೆಯುವುದಕ್ಕೆ ಈ ಮೂಲಕ ಒಪ್ಪಿಗೆಯನ್ನು ನೀಡಿರುತ್ತಾರೆ. ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ದೂರವಾಣಿ ಕರೆಗಳು/ ಇ-ಮೇಲ್‌ಗಳು/ ಕಿರು ಸಂದೇಶ ಸೇವೆ (ಎಸ್‌ಎಂಎಸ್) ಮೂಲಕ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಪ್ರಸ್ತುತ ಹೊಂದಿರದ ಉತ್ಪನ್ನಗಳು ಮತ್ತು ಸೇವೆಗಳ ಮೇಲೆ ಪ್ರೋತ್ಸಾಹಕ ಮಾಹಿತಿಯನ್ನು ಪಡೆಯಲು ಆಶಿಸದೇ ಇದ್ದಲ್ಲಿ ಕಾರ್ಡ್‌ದಾರರು ಮತ್ತು/ಅಥವಾ ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್ ಮೂಲಕ ಅಥವಾ ದೂರವಾಣಿ ಬ್ಯಾಂಕಿಂಗ್ ಮೂಲಕ ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್ ಒದಗಿಸುವ ಇತರ ವೇದಿಕೆಗಳ ಮೂಲಕ "ಕರೆ ಮಾಡಬೇಡಿ" - "ಡು ನಾಟ್ ಕಾಲ್" ಗೆ ನೋಂದಾಯಿಸಬಹುದಾಗಿದೆ ಎನ್ನುವ ಅಂಶವನ್ನು ಅರಿಯುವುದು. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಸೇವೆಯು ಕಾರ್ಡ್‌ದಾರರು ಮತ್ತು ಅರ್ಜಿದಾರರು ಪ್ರಸ್ತುತ ಅನುಭವಿಸುತ್ತಿರುವ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವುದಿಲ್ಲ ಎನ್ನುವ ಅಂಶವನ್ನು ಒಪ್ಪಿರುತ್ತಾರೆ. ಕಾರ್ಡ್‌ದಾರರು/ಅರ್ಜಿದಾರರ ಬ್ಯಾಂಕಿಂಗ್ ಸಂಬಂಧವನ್ನು ಮೌಲ್ಯಯುಕ್ತವಾಗಿಸಿ ಹೆಚ್ಚು ಸೌಕರ್ಯಯುತವಾಗಿಸುವ ನಿಟ್ಟಿನಲ್ಲಿ ವಿನ್ಯಾಸಗೊಳಿಸಿರುವ ಹಣಕಾಸು ಪರಿಹಾರಗಳ ವ್ಯಾಪ್ತಿಯ ಲಾಭಗಳನ್ನು ಪೂರ್ಣವಾಗಿ ಕಾರ್ಡ್‌ದಾರರು/ಅರ್ಜಿದಾರರು ಸಾಕಾರಗೊಳಿಸಿಕೊಳ್ಳಲು ಇದು ಸಹಾಯಕವಾಗುತ್ತದೆ.

16. **ಆಡಳಿತ ಕಾನೂನು ಮತ್ತು ಕಾನೂನು ವ್ಯಾಪ್ತಿ**

16.1 ಈ ಷರತ್ತುಗಳು ಮತ್ತು ನಿಬಂಧನೆಗಳ ರಚನೆ ಮತ್ತು ಯುಕ್ತತೆಯನ್ನು ಭಾರತದಲ್ಲಿನ ಕಾನೂನುಗಳು ಎಲ್ಲ ನೆಲೆಗಳಲ್ಲಿ ನಿಯಂತ್ರಿಸುತ್ತವೆ. ಈ ಷರತ್ತುಗಳು ಮತ್ತು ನಿಬಂಧನೆಗಳಿಂದಾಗಿ ಸೃಷ್ಟಿಯಾಗುವ ಯಾವುದೇ ಕಾನೂನು ಕ್ರಮ ಅಥವಾ ನಡವಳಿಕೆಯನ್ನು ಮುಂಬೈ ನಲ್ಲಿನ ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳ ಮುಂದೆ ತರಲಾಗುವುದು ಹಾಗೂ ಸದರಿ ಕಾನೂನು ಕ್ರಮ ಅಥವಾ ನಡವಳಿಕೆಗಳು ತಮ್ಮನ್ನು

ತಾವು ಅಪರಿವರ್ತನೀಯವಾಗಿ ಆ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ವ್ಯಾಪ್ತಿಗೆ ಒಪ್ಪಿಸಿಕೊಳ್ಳುತ್ತವೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಮತ್ತು ಅರ್ಜಿದಾರರು ಒಪ್ಪುತ್ತಾರೆ. ಆದರೆ, ಹೆಚ್.ಡಿ.ಎಫ್.ಸಿ ಬ್ಯಾಂಕ್, ತನ್ನದೇ ಸಂಪೂರ್ಣ ವಿವೇಚನೆಯನ್ನು ಬಳಸಿ ಈ ಷರತ್ತುಗಳು ಮತ್ತು ನಿಬಂಧನೆಗಳಿಂದಾಗಿ ಸೃಷ್ಟಿಯಾಗುವ ಯಾವುದೇ ಕಾನೂನು ಕ್ರಮ ಅಥವಾ ನಡವಳಿಕೆಯನ್ನುಇತರ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಸೂಕ್ತ ವೇದಿಕೆಯ ಎದುರು ಪ್ರಾರಂಭಿಸಲು ನಿರ್ಧರಿಸಬಹುದಾಗಿದೆ ಹಾಗೂ ಕಾರ್ಡ್‌ದಾರರು ಮತ್ತು ಅರ್ಜಿದಾರರು ಇಂತಹ ವ್ಯಾಪ್ತಿಗೆ ಒಪ್ಪುತ್ತಾರೆ ಹಾಗೂ ಕಾರ್ಡ್‌ದಾರರು ಅಥವಾ ಅರ್ಜಿದಾರರು ಈಗ ಅಥವಾ ಭವಿಷ್ಯದಲ್ಲಿ ಇಂತಹ ಯಾವುದೇ ಕಾನೂನು ಕ್ರಮ ಅಥವಾ ನಡವಳಿಕೆಯನ್ನು ಅನ್ಯ ವೇದಿಕೆಗಳ ಮುಂದೆ ಇರಿಸಿರುವುದನ್ನು ಕುರಿತಂತೆ ಹೊಂದಿರಬಹುದಾದ ಆಕ್ಷೇಪಣೆಯನ್ನು, ಮತ್ತು ಕಾನೂನು ಕ್ರಮ ಅಥವಾ ನಡವಳಿಕೆಯನ್ನು ಅನುಕೂಲಕರವಲ್ಲದ ವೇದಿಕೆಯ ಮುಂದೆ ತರಲಾಗಿದೆ ಎನ್ನುವ ಕ್ಲೈಮ್ ಸಲ್ಲಿಕೆಯನ್ನು ಕೈಬಿಡುತ್ತಾರೆ.

17. **ಪ್ರತಿಭಾರ ಮತ್ತು ಹೊಣೆಗಾರಿಕೆ**

17.1 ಈ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಅಥವಾ ಇತರ ಯಾವುದೇ ದಸ್ತಾವೇಜು/ವ್ಯವಸ್ಥೆಯಲ್ಲಿ ಹೇಳಿರುವುದಕ್ಕೆ ವ್ಯತಿರಿಕ್ತವಾದ ಯಾವುದೇ ಅಂಶದ ಹೊರತಾಗಿಯೂ; (a) ಕಾರ್ಡ್‌ದಾರರು ಮತ್ತು ಅರ್ಜಿದಾರರು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನೊಂದಿಗೆ ಹೊಂದಿರುವ ಸದ್ಯದ ಮತ್ತು ಭವಿಷ್ಯದ ಹೊಣೆಗಳಿಗೆ ಸಂಬಂಧಿಸಿದಂತೆ, ಈ ದಸ್ತಾವೇಜಿನ ಅಡಿಯಲ್ಲಿ ಅಥವಾ ಇತರ ಯಾವುದೇ ಹೊಣೆ/ಋಣ/ಸೌಲಭ್ಯಗಳು/ಸಾಲಗಳು/ದಾಖಲೆಯ ಅಡಿಯಲ್ಲಿ, ಸದರಿ ಹೊಣೆಗಳು ಮೂರ್ತವಾಗಿವೆಯೋ, ನೈಜ ಅಥವಾ ಅನಿಶ್ಚಿತವಾಗಿವೆಯೋ, ಪ್ರಾಥಮಿಕವಾಗಿವೆಯೋ ಅಥವಾ ಸಹಕಾರಿಯಾಗಿವೆಯೋ ಅಥವಾ ಹಲವು ಇಲ್ಲವೇ ಇತರರೊಂದಿಗೆ ಜಂಟಿಯಾಗಿವೆಯೋ, ಪ್ರಧಾನ ಸಾಲಗಾರರಾಗಿ ಮತ್ತು/ಅಥವಾ ಖಾತರಿದಾರ ಮತ್ತು/ಅಥವಾ ಯಾವ ವಿಧದಲ್ಲಿಯಾದರೂ ಏನಾದರೂ ಆಗಿದ್ದರೂ (ಒಟ್ಟಾಗಿ (**"ಹೊಣೆಗಳು"**), ಹೆಚ್.ಡಿ.ಎಫ್.ಸಿ ಬ್ಯಾಂಕ್ ತಾನು ಬ್ಯಾಂಕರ್ ಆಗಿರುವ ಇತರ ಯಾವುದೇ ಸಾಮಾನ್ಯ ಹೊಣೆಗಾರಿಕೆ ಅಥವಾ ಸಮಾನವಾದ ಹಕ್ಕಿಗೆ ಜೊತೆಯಾಗಿ ಅನ್ವಯವಾಗುವ ಕಾನೂನು, ಆಚರಣೆ, ಸಂಪ್ರದಾಯ ಅಥವಾ ಅದಕ್ಕೆ ಹೊರತಾಗಿ, ಕಾರ್ಡ್‌ದಾರರ ಸದ್ಯದ ಮತ್ತು ಭವಿಷ್ಯದ ಸ್ಟಾಕುಗಳು, ಷೇರುಗಳು, ಭದ್ರತೆಗಳು, ಸ್ವತ್ತು, ಲೆಕ್ಕಪುಸ್ತಕದ ಋಣಗಳು, ಚಾಲ್ತಿ, ಉಳಿತಾಯ, ಓವರ್‌ಡ್ರಾಫ್ಟ್, ನಿಶ್ಚಿತ ಮತ್ತು ಇತರ ಠೇವಣಿಗಳೂ ಸೇರಿದಂತೆ ಎಲ್ಲ ಖಾತೆಗಳಲ್ಲಿನ ಹಣಗಳು, ಹೆಚ್.ಡಿ.ಎಫ್.ಸಿ ಬ್ಯಾಂಕಿನಲ್ಲಿ ಸದ್ಯದಲ್ಲಿ ಅಥವಾ ಭವಿಷ್ಯದಲ್ಲಿ ಕಾನೂನು ಅಥವಾ ರಚನಾತ್ಮಕ ಪಾಲನೆಯೊಂದಿಗೆ ಅಥವಾ ಪಾಲನೆಯಲ್ಲಿ ಇರಿಸಲಾದ, ಕಾರ್ಡ್‌ದಾರರು ಮತ್ತು ಅರ್ಜಿದಾರರ ಸಮಾನವಾದ ನೆಲೆಯಲ್ಲಿನ ಅಥವಾ ಭಿನ್ನವಾದ ನೆಲೆಯಲ್ಲಿನ, ಮತ್ತು ಬೇರೆಬೇರೆಯಾಗಿ ಅಥವಾ ಇತರರೊಂದಿಗೆ ಜಂಟಿಯಾಗಿ, ಯಾವುದೇ ಬ್ಯಾಂಕಿಂಗ್ ಸಂಬಂಧ, ಸುರಕ್ಷಿತ ಪಾಲನೆ, ಸಂಗ್ರಹ ಅಥವಾ ಇತರ ಯಾವುದೇ ಕಾರಣಕ್ಕಾಗಿದ್ದಲ್ಲಿ ನಿರ್ದಿಷ್ಟವಾದ ಮತ್ತು ವಿಶೇಷವಾದ ಹೊಣೆಯನ್ನು ಹೊಂದಿರುತ್ತದೆ, ಮತ್ತು (b) ಪ್ರತ್ಯೇಕವಾಗಿ, ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಾವುದೇ ಹೊಣೆಗಳಿಗೆ ಸಂಬಂಧಿಸಿದ ಯಾವುದೇ ಬಾಕಿಗಳನ್ನು ಸಾಕಾರಗೊಳಿಸಿಕೊಳ್ಳುವ ಉದ್ದೇಶಕ್ಕೆ ಅಥವಾ ಅವುಗಳಿಗೆ ಪ್ರತಿಯಾಗಿ ವಸೂಲಿಮಾಡಲು ಮತ್ತು ಕಾರ್ಡ್‌ದಾರರ ಎಲ್ಲ ಅಥವಾ ಯಾವುದೇ ಖಾತೆಗಳನ್ನು ಒಟ್ಟಾಗಿಸಲು ಅಥವಾ ಕ್ರೋಢೀಕರಿಸಲು ಮತ್ತು ಯಾವುದೇ ಹಣಗಳನ್ನು ಪ್ರತಿಭಾರವಾಗಿಸಲು, ಅವು ಒಂದೇ ಸ್ವರೂಪದ್ದಾಗಿರಲಿ ಅಥವಾ ಇಲ್ಲದಿರಲಿ ಮತ್ತು ಸದರಿ ದಸ್ತಾವೇಜುಗಳ ಅನುಸಾರ ಹೊಣೆಗಳು ಬಾಕಿ ಇದ್ದಾಗ ಅವುಗಳ ಯಾವುದೇ ಭಾಗದ ಪಾವತಿಯಲ್ಲಿನ ತಪ್ಪುವಿಕೆಯಿಂದಾಗಿ ಸೇರಿಸಲಾಗುವುದೂ ಸೇರಿದಂತೆ ಸಮಾನವಾದ ಸ್ಥಾನದಲ್ಲಿ ಇರಿಸಲಾಗಿದೆಯೋ ಇಲ್ಲವೋ, ಮೇಲೆಹೇಳಿರುವಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಕಾರ್ಡ್‌ದಾರರು ಮತ್ತು ಅರ್ಜಿದಾರರ ಒಪ್ಪಿಗೆಯ ಹೊರತಾಗಿ ಮತ್ತು ಅವರಿಗೆ ಸೂಚನೆ ನೀಡದೆಯೇ ಎಲ್ಲ ಖಾತೆಗಳಲ್ಲಿನ (ಹೆಚ್.ಡಿ.ಎಫ್.ಸಿ ಬ್ಯಾಂಕ್ ವಿವೇಚನೆಯ ಪ್ರಕಾರ ಪಕ್ವತೆಗೆ ಪೂರ್ವದಲ್ಲಿ ಅಥವಾ ಪಕ್ವತೆಯ ನಂತರ ಹೇಗಾದರೂ) ಎಲ್ಲ ಸದರಿ ಮೊತ್ತಗಳನ್ನು, ಮೇಲೆ ಹೇಳಿರುವಂತೆ ಭದ್ರತೆಗಳು, ಮೊತ್ತಗಳು ಮತ್ತು ಸ್ವತ್ತುಗಳನ್ನು (ನಿರ್ದಿಷ್ಟವಾದ ಹೊಣೆಗೆ ಪ್ರತಿಯಾಗಿ ಗುರುತು ಮಾಡಲಾಗಿದ್ದರೂ ಅಥವಾ ಮಾಡದೇ ಇದ್ದರೂ) ಪ್ರತಿಭಾರವಿರಿಸುವ, ವರ್ಗಾಯಿಸುವ, ಮಾರಾಟ ಮಾಡುವ, ಸಾಕಾರಗೊಳಿಸುವ, ಹೊಂದಿಸುವ, ಸಮುಚಿತಗೊಳಿಸುವ ಪ್ರಕಟವಾದ ಹಕ್ಕುಗಳನ್ನು ಹೊಂದಿರುತ್ತದೆ.

18. **ಬದಲಾವಣೆಗಳ ಸೂಚನೆ**

18.1 ಹೆಚ್.ಡಿ.ಎಫ್.ಸಿ ಬ್ಯಾಂಕ್, ಈ ಮುಂದಿನ ಅಂಶಗಳಿಗೆ ಸಂಬಂಧಿಸಿದಂತೆ, ಯಾವುದೇ ಸಮಯದಲ್ಲಿಯಾಗಲೀ, ಸಂಪೂರ್ಣವಾದ ನಿರ್ಧಾರ-ವಿವೇಚನೆಯನ್ನು ಹೊಂದಿರುತ್ತದೆ: (a) ಈ ಷರತ್ತುಗಳು ಮತ್ತು ನಿಬಂಧನೆಗಳ ಯಾವುದೇ ಅಂಶವನ್ನು ಪರಿಷ್ಕರಿಸಲು ಅಥವಾ ಪೂರಕಾಂಶಗಳನ್ನು ಸೇರಿಸಲು; ಮತ್ತು/ಅಥವಾ (b) ಇವುಗಳಿಗೆ ಮಿತಗೊಳ್ಳದಂತೆ, ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಶುಲ್ಕಗಳು ಅಥವಾ ದರಗಳು ಮತ್ತು/ಅಥವಾ ಶುಲ್ಕಗಳ ಲೆಕ್ಕಾಚಾರದ ವಿಧಾನವನ್ನು ಪ್ರಭಾವಿಸುವ ಬದಲಾವಣೆಗಳೂ ಸೇರಿದಂತೆ, ಪ್ರೀಪೇಯ್ಡ್ ಕಾರ್ಡ್‌ನ ಯಾವುದೇ ಲಕ್ಷಣಾಂಶವನ್ನು ಮತ್ತು/ಅಥವಾ ಅದರ ಮೇಲೆ ನೀಡಲಾಗಿರುವ ಲಾಭವನ್ನು ಬದಲಿಸಲು. ಪರಿಷ್ಕಾರಗೊಳಿಸಲಾದ ಅಂಶಗಳು, ಪೀಪೇಯ್ಡ್ ಕಾರ್ಡ್‌ನ ಲಕ್ಷಣಾಂಶಗಳಲ್ಲಿ ಮಾಡಲಾದ ಬದಲಾವಣೆಗಳು, ಮತ್ತು ಪ್ರೀಪೇಯ್ಡ್ ಕಾರ್ಡ್ ಗೆ ಸಂಬಂಧಿಸಿದಂತೆ ಪರಿಷ್ಕೃತ ಬಡ್ಡಿ, ಶುಲ್ಕಗಳು ಮತ್ತು ದರಗಳ ವಿವರಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ಅಥವಾ ಕಾಲದಿಂದ ಕಾಲಕ್ಕೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿರ್ಧರಿಸುವಂತೆ ಇತರ ಯಾವುದೇ ವಿಧಾನದಲ್ಲಿ ಪ್ರಕಟಿಸುವ ಮೂಲಕ ಗ್ರಾಹಕರಿಗೆ ಸಂವಹಿಸುತ್ತದೆ. ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಕಾಲದಿಂದ ಕಾಲಕ್ಕೆ ಪ್ರಕಟಿಸಲಾಗುವ ಷರತ್ತುಗಳು ಮತ್ತು ನಿಬಂಧನೆಗಳ ಪರಿಷ್ಕೃತ ಮತ್ತು ಇತ್ತೀಚಿನ ಆವೃತ್ತಿಗಳನ್ನು ನಿಯತವಾಗಿ ಪರಿಶೀಲಿಸುವುದು ಕಾರ್ಡ್‌ದಾರರು ಮತ್ತು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ ಹಾಗೂ ಪರಿಷ್ಕೃತವಾದ ಷರತ್ತುಗಳು ಮತ್ತು ನಿಬಂಧನೆಗಳ

ಆವೃತ್ತಿಯನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ನಂತರ ಪ್ರೀಪೇಯ್ಡ್ ಕಾರ್ಡ್ ಬಳಕೆಯನ್ನು ಮುಂದುವರೆಸುವ ಮೂಲಕ ಕಾರ್ಡ್‌ದಾರರು ಮತ್ತು ಅರ್ಜಿದಾರರು ಪರಿಷ್ಕೃತ ಷರತ್ತುಗಳು ಮತ್ತು ನಿಬಂಧನೆಗಳನ್ನು ಒಪ್ಪಿರುತ್ತಾರೆ ಎಂದು ಪರಿಗಣಿತವಾಗುತ್ತದೆ.

19. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಷರತ್ತುಗಳು ಮತ್ತು ನಿಬಂಧನೆಗಳಿಗೆ ಮತ್ತು/ಅಥವಾ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ತನಗೆ ಸೂಕ್ತವೆಂದು ತೋರುವ ವ್ಯಾಪಾರ ನಿರ್ವಹಣೆಕಾರರು/ ತೃತೀಯ ಪಕ್ಷದ ಉಪ-ಗುತ್ತಿಗೆದಾರರು/ಏಜೆಂಟರು/ಸೇವಾ ಪೂರೈಕೆದಾರರನ್ನು ಬಳಸಿಕೊಳ್ಳಬಹುದಾಗಿದೆ ಎನ್ನುವ ಅಂಶವನ್ನು ಕಾರ್ಡ್‌ದಾರರು ಮತ್ತು ಅರ್ಜಿದಾರರು ಒಪ್ಪಿ ಸ್ಥಿರೀಕರಿಸುತ್ತಾರೆ.

20. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ಮೂಲಕ ಹೆಚ್.ಡಿ.ಎಫ್.ಸಿ ಬ್ಯಾಂಕ್ ವೆಬ್‌ಸೈಟ್‌ನಲ್ಲಿ (https://www.hdfcbank.com/assets/pdf/Customer-Protection-Policy.pdf) ಲಭ್ಯವಿರುವ ಹೆಚ್.ಡಿ.ಎಫ್.ಸಿ ಗ್ರಾಹಕ ಸಂರಕ್ಷಣಾ ನೀತಿಯನ್ನು ತಾವು ಓದಿ ಅರ್ಥಮಾಡಿಕೊಂಡಿರುವುದಾಗಿ ಗುರುತಿಸಿ, ಒಪ್ಪಿ, ಸ್ಥಿರೀಕರಿಸುತ್ತಾರೆ ಮತ್ತು ಕಾರ್ಡ್‌ದಾರರಲ್ಲದೆ ಇತರ ಯಾವುದೇ ವ್ಯಕ್ತಿಯಿಂದ ಪ್ರೀಪೇಯ್ಡ್ ಕಾರ್ಡ್ ಬಳಕೆಯ ಸಂದರ್ಭದಲ್ಲಿ, ಮಿತಿಯಿರದಂತೆ, ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ನೀತಿಗೆ ಬದ್ಧವಾಗಿರುವುದಾಗಿ ಗುರುತಿಸಿ ಒಪ್ಪಿರುತ್ತಾರೆ.

21. ಕಾರ್ಡ್‌ದಾರರು ಮತ್ತು ಅರ್ಜಿದಾರರು ಈ ನಿಯಮಗಳು ಮತ್ತು ಷರತ್ತುಗಳು ಕೇವಲ ಹೆಚ್.ಡಿ.ಎಫ್.ಸಿ ಬ್ಯಾಂಕ್ ಹಾಗೂ ಕಾರ್ಡ್‌ದಾರರು ಮತ್ತು ಅರ್ಜಿದಾರರ ನಡುವೆ ಇರುತ್ತದೆ ಮತ್ತು ಇವುಗಳಡಿಯಲ್ಲಿ ಇತರ ಯಾವುದೇ ಮೂರನೆಯ ಪಕ್ಷವು ಯಾವುದೇ ಹಕ್ಕುಗಳು ಅಥವಾ ಹೊಣೆಗಳನ್ನು ಹೊಂದಿರುವುದಿಲ್ಲ ಎನ್ನುವ ಅಂಶವನ್ನು ಗುರುತಿಸಿ, ಒಪ್ಪಿ, ಸ್ಥಿರೀಕರಿಸುತ್ತಾರೆ.

22. ಅರ್ಜಿದಾರರು ಅರ್ಜಿ ನಮೂನೆಯನ್ನು ಸಲ್ಲಿಸುವ ಮೂಲಕ ಷರತ್ತುಗಳು ಮತ್ತು ನಿಬಂಧನೆಗಳನ್ನು ಒಪ್ಪುತ್ತಾರೆ ಮತ್ತು ಇಂತಹ ಸಲ್ಲಿಸುವಿಕೆಯ ನಂತರ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಹಾಗೂ ಒಪ್ಪಂದದ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಈ ನಿಯಮಗಳು ಮತ್ತು ಷರತ್ತುಗಳು ಅರ್ಜಿದಾರರು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ನಡುವಿನ ಒಪ್ಪಂದವನ್ನು ಪ್ರತಿನಿಧಿಸುತ್ತದೆ.

23. ಕಾರ್ಡ್‌ದಾರರು ಪ್ರೀಪೇಯ್ಡ್ ಕಾರ್ಡ್ ಬಳಸುವ ಮೂಲಕ ಷರತ್ತುಗಳು ಮತ್ತು ನಿಬಂಧನೆಗಳನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಪ್ರೀಪೇಯ್ಡ್ ಕಾರ್ಡಿನ ಮೊದಲ ಬಳಕೆಯ ನಂತರ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಹಾಗೂ ಒಪ್ಪಂದದ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಈ ನಿಯಮಗಳು ಮತ್ತು ಷರತ್ತುಗಳು ಕಾರ್ಡ್‌ದಾರರು ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ನಡುವಿನ ಒಪ್ಪಂದವನ್ನು ಪ್ರತಿನಿಧಿಸುತ್ತದೆ.

**ದಾವೆನಿರಾಕರಣೆ: ಮೇಲ್ಕಾಣಿಸದ ದಸ್ತಾವೇಜು ಮೂಲ ಇಂಗ್ಲಿಷ್ ರೂಪಣೆಯ ಭಾಷಾಂತರವಾಗಿದೆ. ವಿಷಯ ವಸ್ತುವಿನಲ್ಲಿ ಏನಾದರೂ ಅಸಾಂಗತಟ್ಟಿದ್ದರೆ, ಇದರ ಇಂಗ್ಲಿಷ್ ರೂಪಣೆ ಪ್ರಚಲಿತವಾಗುತ್ತದೆ. ಯಾವುದೇ ವಿಚಾರಣೆಗಾಗಿ ದಯವಿಟ್ಟು ಸ್ಥಳೀಯ ಎಚ್‌ಡಿಎಫ್‌ಸಿ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿರಿ.**